ಹೊಸತು

ತಿಂಗಳ ಪತ್ರಿಕೆ

ಫೆಬ್ರವರಿ : 1999

- ನೊಂದವಳ ಕಥೆ - ವ್ಯಥೆ
- ನಿರಂತರ ಹೋರಾಟದಿಂದ ಮಾತ್ರ ಜಾತ್ಯಾತೀತತೆ ಸಾಧ್ಯ
- ಮತಾಂಧರ ವಿರುದ್ಧ ತಸ್ಲಿಭಾನು ಬಂಡಾಯ
- ಸತಿ ಪದ್ಧತಿ ಸಮರ್ಥಿಸುವ ಮತಾಂಧರು
- ದ್ವೇಷದ ರೋಗಾಣುವಿಗೊಂದು ಮದ್ದು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 14 ಸಂಚಿಕೆ : 2

ಫೆಬ್ರುವರಿ : 1999

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಮಾರ್ಚ್ 8ರ ಸಂಭ್ರಮ ಎಲ್ಲಾ ಕಡೆ. ಈ ಸಂಭ್ರಮಗಳ ನಡುವೆಯೇ ಮಹಿಳಾ ಸಂಘಟನೆಗಳ ಮುಂದಿರುವ ಸವಾಲುಗಳನ್ನು ಕುರಿತು ಆಲೋಚಿಸುವುದು ಅತ್ಯಂತ ಅಗತ್ಯವಾಗಿದೆ. 1970ರ ದಶಕದಿಂದ ಮಹಿಳಾ ಚಳುವಳಿಯ ವಿವಿಧ ಗುಂಪುಗಳು ವಿವಿಧ ಸಮಸ್ಯೆಗಳ ಸುತ್ತ ಹೋರಾಟ ನಡೆಸುತ್ತಲೇ ಬಂದಿವೆ. ಈ ಹೋರಾಟದ ಫಲವಾಗಿ ಇಂದು ವಿವಿಧ ಕ್ಷೇತ್ರಗಳಲ್ಲಿ ಆದ ಬದಲಾವಣೆಗಳನ್ನು ನಾವು ಗುರುತಿಸಬಹುದಾಗಿದೆ. ಮಹಿಳಾ ಚಳುವಳಿಯ ಹೋರಾಟಗಳು ಬೇರೆ ಬೇರೆಯಾದ ನಿರ್ದಿಷ್ಟ ರೂಪವನ್ನು ತೆಗೆದುಕೊಂಡು ತಮ್ಮ ಹೋರಾಟವನ್ನು ಹೆಚ್ಚು ತೀವ್ರಗೊಳಿಸುತ್ತಿವೆ. ಹಾಗೆಯೇ ಇತರ ಅಭಿವೃದ್ಧಿ ಸಂಬಂಧಿತ ಹೋರಾಟಗಳೂ ಸಹ ಅನೇಕಾನೇಕ ರೀತಿಯಲ್ಲಿ ಸರ್ಕಾರಿ ಯೋಜನೆಗಳ ಅಡಿಪಾಯಗಳನ್ನು ತೀವ್ರ ರೀತಿಯಲ್ಲಿ ಪ್ರಶ್ನಿಸತೊಡಗಿವೆ.

ಆಂಧ್ರದ ಮಹಿಳಾ ಹೋರಾಟ, ಕಲ್ಕತ್ತೆಯಲ್ಲಿ ವೇಶ್ಯಾವಾಟಿಕೆಯ ಕಾನೂನುಗಳಿಗಾಗಿ ವೇಶ್ಯೆಯರು ನಡೆಸುತ್ತಿರುವ ಹೋರಾಟ, ಲೆಸ್‌ಬಿಯನ್‌ರು ಸಾರ್ವಜನಿಕವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವುದು, ರಾಜಾಸ್ತಾನದ ಸಾತಿನ್‌ರ ಹೋರಾಟ ಇವುಗಳನ್ನು ಪರ್ಯಾಯ ವ್ಯವಸ್ಥೆಯ ಆಶಯಕ್ಕಾಗಿರುವ ಹೆಜ್ಜೆಗಳು ಎಂದು ಗುರುತಿಸಬಹುದಾಗಿದೆ. ಸಮಸ್ಯೆಗಳನ್ನು ಅನುಭವಿಸುವ ಜನರೇ ತಮ್ಮ ಸಮಸ್ಯೆಗಳನ್ನು ತಾವೇ ಕೈಗೆತ್ತಿಕೊಂಡು ಹೋರಾಡುತ್ತಿರುವುದು ಭರವಸೆಯನ್ನು ಹುಟ್ಟುಹಾಕುವಂತಾಗಿದೆ.

ಸರ್ಕಾರಿ ಹಾಗೂ ಇತರ ವಿಭಾಗಗಳೂ ಇಂದು ಮಹಿಳಾ ದಿನವನ್ನು ಆಚರಿಸತೊಡಗಿವೆ. ಈ ಆಚರಣೆಯ ಹಿಂದಿರುವ 'ಹೈಜಾಕಿಂಗ್' ಹಾಗೂ ಗ್ರಾಹಕ ಪ್ರವೃತ್ತಿಯ ಬಗ್ಗೆ ನಮಗೆಲ್ಲರಿಗೂ ಅರಿವಿದೆ. ಸರ್ಕಾರದ 'ಕೋ ಆಪ್‌ಶನ್' ಬಗ್ಗೆ ಜಾಗರೂಕರಾಗುವ ಬಗ್ಗೆ ಮಹಿಳಾ ಚಳುವಳಿಯು ಪ್ರಾರಂಭದಿಂದಲೂ ಬಲವಾದ ಧ್ವನಿಯನ್ನು ಹೊಂದಿದೆ. ಬಿ.ಜೆ.ಪಿ.ಯಂತಹ ಬಲಪಂಥೀಯ ಪಕ್ಷಗಳು ಕೋಮುವಾದದ ನೆರಳನ್ನು ಪ್ರತಿಯೊಬ್ಬರ ನಿತ್ಯ ಬದುಕಿನಲ್ಲಿಯೂ ಹರಡತೊಡಗಿವೆ. ಹಿಂದುತ್ವದ ಹೆಸರಿನಲ್ಲಿ, ಮಹಿಳೆಯರನ್ನು ಬಂಧಿಸುವ, ಸಾಂಸ್ಕೃತಿಕ ಹೆಸರಿನಲ್ಲಿ ಮನೆಯೊಳಗೆ ತಳ್ಳಿಬಿಡುವ ಪ್ರವೃತ್ತಿ ಬಲವಾಗತೊಡಗಿವೆ. ಬಲಪಂಥೀಯರಿಂದ ಬರುತ್ತಿರುವ ಈ 'ಬ್ಯಾಕ್‌ಲಾಷ್'ನ್ನು ಎದುರಿಸುವುದು ಮಹಿಳಾ ಚಳುವಳಿಯ ಮುಂದಿರುವ ಅತ್ಯಂತ ದೊಡ್ಡ ಸವಾಲಾಗಿದೆ.

ಈ ಸವಾಲನ್ನು ಎದುರಿಸುವ ಹಂತದಲ್ಲಿ ಪರ್ಯಾಯ ಜನಾಂದೋಲನ ತೀವ್ರಗೊಳಿಸುವುದು ಅಗತ್ಯವಾಗಿದೆ. ಇತರ ಚಳುವಳಿಗಳೊಡನೆ ಮಹಿಳಾ ಚಳುವಳಿಯ ಸಂಪರ್ಕ ಹೆಚ್ಚಾಗಬೇಕಿದೆ. ರೈತ ಚಳುವಳಿ, ದಲಿತ ಚಳುವಳಿ, ಆದಿವಾಸಿಗಳ ಚಳುವಳಿ, ಎಡಪಂಥೀಯ ಚಳುವಳಿಗಳೊಡನೆ ಸಮಸ್ಯೆಗಳ ಸುತ್ತ ಹೋರಾಡುವಂತಹ ಒಂದು ವಿಶಾಲವಾದ ಚೌಕಟ್ಟಿನಲ್ಲಿ, ವಿಶಾಲವಾದ ವೇದಿಕೆಯಲ್ಲಿ ಮಹಿಳಾ ಚಳುವಳಿ ಹೋರಾಟ ನಡೆಸಬೇಕಾಗಿದೆ ಹಾಗೂ ಕೋಮುವಾದ ಒಡ್ಡುತ್ತಿರುವ ಸವಾಲುಗಳನ್ನು ಎದುರಿಸಬೇಕಾಗಿದೆ.

ನೊಂದವಳ ಕಥೆ - ವ್ಯಥೆ

ಗಂಡನಿಂದ ಪರಿತ್ಯಕ್ತಳಾದ, ತಂದೆ-ತಾಯಿಯರಿಂದ ತಿರಸ್ಕರಿಸಲ್ಪಟ್ಟ ಮತ್ತು ಕ್ರೂರವಾಗಿ ಅತ್ಯಾಚಾರಕ್ಕೊಳಪಟ್ಟ ಅಂಜನಾ ಮಿಶ್ರಾಳ ಜೀವನವು ಹಲವಾರು ದುರಂತಗಳಿಂದ ಕೂಡಿದೆ.

ರಾಜ್ಯದಲ್ಲಿ ಬಿರುಗಾಳಿಯನ್ನೆ ಬೀಸಿ ಹಲವಾರು ರಾಜಕೀಯ ಬದಲಾವಣೆಗೆ ಕಾರಣವಾದ ಅಂಜನಾ ಮಿಶ್ರಾ ಪ್ರಕರಣ ಗೊಂದಲಮಯ ಹಂತವನ್ನು ತಲುಪಿದೆ. ಅವಳ ಮೇಲೆ ಗಂಡ, ತಂದೆ, ತಾಯಿ, ಸರ್ಕಾರ, ಅಧಿಕಾರಶಾಹಿ ಒಟ್ಟಾಗಿ ನಡೆಸಲಾದ ಅಮಾನುಷ ಶೋಷಣೆಯನ್ನು ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ಒಂದು ದುರಂತವೇ ಸರಿ. ಅತ್ಯಾಚಾರಕ್ಕೊಳಗಾದ ಹೆಣ್ಣೊಬ್ಬಳಿಗೆ ನ್ಯಾಯ ದೊರಕಿಸಿಕೊಡುವ ತುರ್ತಿಗಿಂತ, ತಮ್ಮ ಹುನ್ನಾರಗಳಿಗೆ ಘಟನೆಯನ್ನು ಬಳಸಿಕೊಳ್ಳುತ್ತಿರುವುದು ಖಂಡನೀಯ.

ನನ್ನ ಪ್ರಯತ್ನವನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ದಿನ ಕಳೆದಂತೆ ನನ್ನಲ್ಲಿ ಈ ಹೋರಾಟದ ಕೊನೆಯ ಹಂತ ತಲುಪುವ ಸಂಕಲ್ಪ ಶಕ್ತಿ ಹೆಚ್ಚಾಗುತ್ತಿದೆ. ನನ್ನ ಇಚ್ಛಾಶಕ್ತಿಯು ಬಲವಾಗಿ ಗಟ್ಟಿಗೊಳ್ಳುತ್ತಿದೆ. ನನ್ನ ಇಚ್ಛಾಶಕ್ತಿಯಿಂದ ಮಹಿಳೆಯರು ಮೊದಲು ಮನುಷ್ಯರು, ನಂತರ ಮಹಿಳೆಯರು ಮತ್ತು ಮಹಿಳೆಯರನ್ನು ಮನುಷ್ಯತ್ವದಿಂದ ನಡೆಸಿಕೊಳ್ಳಬೇಕು" - ಎಂಬುದನ್ನು ಸಿದ್ಧಪಡಿಸಿ ತೋರಿಸುತ್ತೇನೆ.

ನನ್ನ ಕಥೆಯೊಂದು ಅಂತ್ಯವಿಲ್ಲದ, ಸಾಟಿಯಿಲ್ಲದ ನೋವಿನ ಕಥೆ, ಒರಿಸ್ಸಾದ ಅತ್ಯಂತ ಪ್ರತಿಷ್ಠಿತರೆಂದು ಕರೆದುಕೊಳ್ಳುವ ಮನೆತನದಲ್ಲಿ 11 ಮೇ 1969ರಲ್ಲಿ ಜನಿಸಿದೆ. ನನ್ನ ಬಾಲ್ಯ ಸುಖಮಯವಾಗಿ, ಸಕಲ ಭಾಗ್ಯಗಳಿಂದ ಕೂಡಿತ್ತು. ಕಾನ್ವೆಂಟ್ ಶಿಕ್ಷಣದ ಹಿನ್ನೆಲೆಯು ನನ್ನ ಬೆನ್ನಿಗಿತ್ತು. ನಾನು ಶಾಲೆಯಲ್ಲಿ ಓದಿನ ಜೊತೆಗೆ ಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಹೆಚ್ಚಾಗಿ ಭಾಗವಹಿಸಲು ಇಚ್ಛಿಸುತ್ತಿದ್ದೆ.

ನನಗೆ ತಂದೆಯೊಡನೆ ವಿಶೇಷ ಆತ್ಮೀಯ ಒಡನಾಟವಿತ್ತು. ಅಕ್ಕ ನನ್ನ ಅತ್ಯುತ್ತಮ ಗೆಳತಿಯಾಗಿದ್ದು ಅವಳ ಬಳಿ ನಾನು ಮನಸ್ಸು ಬಿಚ್ಚಿ ಎಲ್ಲವನ್ನೂ ಹೇಳಿಕೊಳ್ಳುತ್ತಿದ್ದೆ. ಈಗ ಅವರೆಲ್ಲ ಎಲ್ಲಿ? ಮತ್ತು ಯಾಕೆ ದೂರವಾಗಿದ್ದಾರೆ?

ನಾನು ಪಿ.ಯು.ಸಿ. (ವಿಜ್ಞಾನ) ಎರಡನೆ ವರ್ಷದಲ್ಲಿದ್ದಾಗ ನನ್ನಕ್ಕ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಆಗಿದ್ದವಳು ನಮ್ಮ ತಂದೆ-ತಾಯಿ ಹಾಗೂ ಬಂಧುಗಳ ಇಚ್ಛೆಗೆ ವಿರುದ್ಧವಾಗಿ ಬೇರೆ ಜಾತಿಯ ಹುಡುಗನನ್ನು ರಿಜಿಸ್ಟರ್ಡ್ ಮದುವೆಯಾದಳು. ಈ ಹಗರಣವು ಭುವನೇಶ್ವರದಲ್ಲಿ ಅಭೂತಪೂರ್ವ ಆಯಾಮವನ್ನು ಸೃಷ್ಟಿಸಿತ್ತು. ಇದಕ್ಕೆ ನಿಜವಾಗಲೂ ನಾನು ಬಲಿಪಶುವಾದೆ. ನನ್ನ ಅಕ್ಕನ ಮದುವೆ ಮತ್ತೆ ಪುನರಾವೃತ್ತಿಯಾಗಬಾರದಲ್ಲ, ಅಂದರೆ ಭವಿಷ್ಯದಲ್ಲಿ ಅಂತಹ ಕ್ರಾಂತಿಕಾರಿ ಕಾರ್ಯ ನನ್ನಿಂದ ನಡೆಯಬಾರದು ಹಾಗೂ ನನ್ನಕ್ಕನ ಮದುವೆಯಿಂದಾಗಿ ತಮ್ಮ ಕಳೆದುಹೋದ ಘನತೆ ಮರಳಿ ಪಡೆದುಕೊಳ್ಳುವುದಕ್ಕಾಗಿ ನನ್ನ ತಂದೆತಾಯಿಯರು ತಕ್ಷಣವೇ ನನ್ನ ಮದುವೆ ಮಾಡಿಬಿಡಬೇಕೆಂದು ನಿರ್ಧರಿಸಿದರು.

ಸುಭಾಷ್ ಒಬ್ಬ ಒರಿಯಾ ಬ್ರಾಹ್ಮಣ, ಐ.ಎಫ್.ಎಸ್. (IFS) ಅಧಿಕಾರಿಯಾಗಿದ್ದನು, ರೂಪವಂತನೂ ಹೌದು. ವರದಕ್ಷಿಣೆ, ವಯಸ್ಸಿನ ಅಂತರ ಸಾಂಪ್ರದಾಯಿಕ ವ್ಯತ್ಯಾಸಗಳಿದ್ದರೂ ಅವುಗಳನ್ನು ಗಮನಿಸಲಿಲ್ಲ. ಅದೊಂದು ರಾಜಮನೆತನದವರ ಮದುವೆಯಂತೆಯೇ ನಡೆಯಿತು.

ನಾನು ನನ್ನ ಶಾಲೆಯ ದಿನಗಳಲ್ಲಿ ವರದಕ್ಷಿಣೆಯ ವಿರುದ್ಧ ದನಿಯೆತ್ತಿ ಕೂಗಾಡುವವಳಾಗಿದ್ದೆ. ಆದರೆ ನನ್ನ ಮದುವೆಗೆ ಎರಡು ದಿನ ಮುಂಚೆ ವರದಕ್ಷಿಣೆಗಾಗಿ ಮಾತುಕತೆ ಜೋರಾಗಿಯೇ ನಡೆಯಿತೆಂದು ತಿಳಿದುಬಂದಾಗ ಆಘಾತ ಕ್ಕೊಳಗಾದೆ. ನಾನು ಸ್ವಲ್ಪ ಹೆಚ್ಚು ಕಡಿಮೆಯಾದರೂ ಧಾರೆಯ ಸ್ಥಳದಿಂದ ಹೊರಹೋಗಹುದೆಂದು ನನ್ನ ತಂದೆ ಭಾವನಾತ್ಮಕವಾಗಿ ತಲೆಯ ಮೇಲೆ ಕೈಯನ್ನಿಟ್ಟು ನಾನು ಹಾಗೆ ಮಾಡದಂತೆ ತಡೆದರು. ಮದುವೆ ನಡೆಯುವಾಗ ವರದಕ್ಷಿಣೆಯ ತಕರಾರು ಏಳಲಿಲ್ಲ. ಮದುವೆಯ ನಂತರ ಅತ್ತೆಯ ಮನೆಗೆ ನಾನು ಹೋಗುವ ಮುಂಚೆ ವರದಕ್ಷಿಣೆ ಸಂದಾಯ ಮಾಡಲ್ಪಟ್ಟಿದೆಯೆಂದು ಮದುವೆಯ ನಾಲ್ಕು ದಿನಗಳ ನಂತರ ತಿಳಿದುಬಂದಿತು.

ದಾಂಪತ್ಯ ಜೀವನ ಕಹಿ ಪ್ರಸಂಗದಿಂದಲೇ ಆರಂಭವಾಯಿತು. ವರದಕ್ಷಿಣೆಯ ಬೇಡಿಕೆ ಮತ್ತು ಲೈಂಗಿಕ ಕಿರುಕುಳ ಸುಭಾಷನಿಂದ ದಾಂಪತ್ಯ ಜೀವನದ ಪ್ರಥಮ ರಾತ್ರಿಯೇ

ಶುರುವಾಯಿತು. ಕೆಲವೇ ಕೆಲವು ಮೃದು ಮಧುರ ಕ್ಷಣಗಳನ್ನು ಬಿಟ್ಟರೆ ಉಳಿದಿದ್ದೆಲ್ಲ ಬರೀ ಆತಂಕ, ಭಯದಿಂದಲೇ ತುಂಬಿತ್ತು. ನಾನು ನಿಜವಾಗಿಯೂ ಯಾವತ್ತೂ ಹೃದಯತುಂಬಿ ಆನಂದವನ್ನು ಅನುಭವಿಸಲಿಲ್ಲ.

ಪ್ರೀತಿ, ಪ್ರೇಮದ ಬಗೆಗಿನ ಸುಂದರವಾದ, ನವಿರಾದ ಭಾವನೆಗಳು ನನ್ನ ಮದುವೆಯ ಎರಡು ದಿನಗಳ ಬಳಿಕ ನನ್ನ ಪತಿ, ಅವನತ್ತಿಗೆರಾಜಲಕ್ಷ್ಮಿಯ ತೋಳುಗಳಲ್ಲಿದ್ದುದನ್ನು ಕಂಡ ಕೂಡಲೇ ನುಚ್ಚುನೂರಾದವು. ನಾನು ಅದನ್ನು ಪ್ರತ್ಯಕ್ಷ ಕಂಡದ್ದಕ್ಕೆ ತೆತ್ತ ಬೆಲೆ ಸುಭಾಷನ ಬೂಟು ಕಾಲಿನ ಒದೆತ. ಹೊರಬರಲು ಅಸಾಧ್ಯವಾದಂತಹ ಮದುವೆಯೆಂಬ ವ್ಯವಸ್ಥೆಯಲ್ಲಿ ನಾನು ಬಂಧಿತಳಾಗಿದ್ದೆ. ನನ್ನ ಮನಸ್ಸೆಂಬ ಮಂಜಿನಲ್ಲಿ ಮರೆಯಾಗಿ ಹೋಗಿದ್ದ ಭಾವನೆಗಳನ್ನು ಮತ್ತೆ ಗರಿಗೆದರಿಸಿದ್ದು ನಿಶಿತನ ಹುಟ್ಟು. ನಾನು ಮರೆತ ಸಾವಿರ ಹಾಡುಗಳಲ್ಲಿನ ಸಾಲುಗಳನ್ನು ನೆನಪಿಸಿಕೊಂಡು ಚೂರು ಚೂರಾಗಿದ್ದ ಕನಸುಗಳನ್ನು ಮತ್ತೆ ಒಟ್ಟು ಸೇರಿಸಿ ಸಂತಸದಿಂದ ಹೊಸ ಜೀವನವನ್ನು ಪ್ರಾರಂಭಿಸಬೇಕೆಂದು ಯೋಚಿಸಿದೆ. ತಾಯಿಯ ಕನಸುಗಳನ್ನು ನನಸು ಮಾಡುವವನಂತೆ 18.3.89 ರಲ್ಲಿ ನನ್ನ ಜೀವನದಲ್ಲಿ ನಿಶಿತ ಆಗಮಿಸಿದ. ಆ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ.

ಸುಭಾಷ್ ನನ್ನನ್ನು 'ಮಾನಸಿಕ ಅಸ್ವಸ್ಥಳು (ಹುಚ್ಚಿ)' ಎಂದು ಪ್ರಾಮಾಣೀಕರಿಸಲು ಪ್ರಯತ್ನಿಸಿದ್ದು ಒಂದು ದುರಂತ. ಸುಭಾಷ ಮತ್ತು ರಾಜಲಕ್ಷ್ಮಿಯಿಂದ ವರದಕ್ಷಿಣೆಗಾಗಿ ದೈಹಿಕ ಕಿರುಕುಳಕ್ಕೊಳಪಟ್ಟಿದ್ದಲ್ಲದೆ ನನಗೆ ಅನೇಕ ವಿಧದ ಔಷಧಿಗಳು, ಚುಚ್ಚುಮದ್ದುಗಳನ್ನು ಕೊಡಿಸಿದರು. ಅವರು ನನಗೆ ಪದೇ ಪದೇ ಔಷಧಿಯ ಮತ್ತಿನಲ್ಲಿ ನೆನಪಿಸುತ್ತಿದ್ದೇನೆಂದರೆ ನಾನು ಯಾಕೆ ಇನ್ನೂ ಜೀವಿಸುತ್ತಿದ್ದೇನೆ? ಮತ್ತು ಆತ್ಮಹತ್ಯೆ ಯಾಕೆ ಮಾಡಿಕೊಳ್ಳುತ್ತಿಲ್ಲ? ಅಲ್ಲದೇ ಕ್ರಿಮಿನಾಶಕ ಔಷಧಿಗಳು ಔಟ್‌ಹೌಸಿನಲ್ಲಿವೆ. ಅವು ತೀವ್ರ ಹಾಗು ಸುರಕ್ಷಿತ ಸಾವಿಗೆ ಸಹಾಯ ಮಾಡುತ್ತವೆಂದು ಹೇಳುತ್ತಿದ್ದರು. ಅಂತಹ ಕ್ಷಣಗಳಲ್ಲಿ ನಾನು ಸಾಯಬೇಕೆಂದು ಅನ್ನಿಸಿದರೂ ನನ್ನ ಇಚ್ಛಾಶಕ್ತಿಯು ಜಾಗೃತವಾಗಿ ಹೆಚ್ಚು ಹೆಚ್ಚು ಬಲಯುತವಾಗಿ ನನ್ನನ್ನು ಸಾಯಿಸ ಬೇಕೆಂದು ಬಯಸುವವರಿಗಾಗಿ ನಾನು ಖಂಡಿತ ಸಾಯಬಾರದು, ಅವರಿಗೆಂದೂ ಶರಣಾಗಬಾರದು ಎಂದುಕೊಂಡೆ. ತಾಯಿ ಮಗುವಿನ ಮಧುರವಾದ, ಅಪ್ಯಾಯಮಾನವಾದ ಕ್ಷಣಗಳು ನಿಶಿತನೊಡನೆ ಕಳೆದವುಗಳು. ಅವು ಅತ್ಯಂತ ಅಮೂಲ್ಯ ವಾದವುಗಳು. ಇವತ್ತೂ ನನ್ನ ಜೀವನದಲ್ಲಿ ಅದನ್ನೇ ಜ್ಞಾಪಿಸಿಕೊಳ್ಳುತ್ತಿರುತ್ತೇನೆ.

ಜೀವನವು ದುರಂತದಿಂದ ಕೂಡಿದ್ದುದ್ದರಿಂದ ನಾನು ನನ್ನ ಹೋರಾಟವನ್ನು ಶಾಂತವಾಗಿ, ಗಟ್ಟಿಗೊಂಡ ನಿರ್ಧಾರದಿಂದ ನಡೆಸಿದ್ದೆ. ಸುಭಾಷನಿಗೆ ಅವನತ್ತಿಗೆ ಜೊತೆಗಿದ್ದ ಅಕ್ರಮ ಸಂಬಂಧ ನನ್ನನ್ನು ಆಳವಾದ ನೋವಿಗೆ ಈಡು ಮಾಡಿತ್ತು. ಇಂತಹ ಅಕ್ರಮ ಸಂಬಂಧಕ್ಕೆ ಇನ್ನಷ್ಟು ಕುರೂಪ ತಾಳಿದ್ದು ನಮ್ಮತ್ತೆ ಮಾವ, ರಾಜಲಕ್ಷ್ಮಿ, ಸುಭಾಷರು ಸಮಾಜದ ಎಲ್ಲ ಕಟ್ಟುಪಾಡುಗಳನ್ನು ಮೀರಿ ಇಂತಹ ಸಂಬಂಧದಿಂದ ಮಗುವನ್ನು ಪಡೆಯಬೇಕೆಂದು ಇಚ್ಛಿಸುವರೆಂದು ಅರಿವಾದಾಗ ನಾನು ಬಲವಾದ ಆಘಾತಕ್ಕೊಳಗಾದೆ. ನಾನು ಛಲದಿಂದ ಹೋರಾಡುತ್ತಲೇ ಇದ್ದೆ. ಅದಕ್ಕಾಗಿ ನಾನು ಅಮೂಲ್ಯ ಬೆಲೆಯನ್ನು ತೆರಬೇಕಾಗುತ್ತದೆಂದು ತಿಳಿದಿರಲಿಲ್ಲ.

ಸುಭಾಷನ ಭಾರದ ಬೇಡಿಕೆಗಳಲ್ಲಿ ನಾಜೂಕಿನವಳಾದ ನಾನು ಕುಸಿಯುತ್ತಿರುವಾಗ ದೀರ್ಘವಾದ ಕತೆಯನ್ನು ಸುಲಭವಾಗಿ ಮೊಟಕುಗೊಳಿಸಲು ಅವನು ಪ್ರಯತ್ನಿಸಿದ. ಡೈವೋರ್ಸ್ ನೀಡಬೇಕೆಂದು ಯೋಚಿಸಿ ಅದಕ್ಕಾಗಿ ಸುಲಭದ ಹಾಗೂ ತಕ್ಷಣದ ಸೂತ್ರ 'ಮಾನಸಿಕ ಅಸ್ವಸ್ಥತೆ'ಯ ದಾರಿಯನ್ನು ಹುಡುಕಿದ.

ನನಗೆ ಜಯದ ಕ್ಷಣ ದೊರತಿದ್ದು 1991ರಲ್ಲಿ ಬೆರಹಾಂಪುರ ವಿಶ್ವವಿದ್ಯಾಲಯದ ಆನರ್ಸ್ ಡಿಗ್ರಿ ಇಂಗ್ಲೀಷ್ ಸಾಹಿತ್ಯದಲ್ಲಿ ಕಾಲೇಜಿಗೆ ಹೋಗದೇ ದೊರಕಿಸಿಕೊಂಡಿದ್ದು, ಆದರೆ ರಾಜಲಕ್ಷ್ಮಿ ತನ್ನೆಲ್ಲ ಲಗ್ಗೇಜಿನೊಡನೆ 1994ರಲ್ಲಿ ಸಂಭಾಲಪುರದಲ್ಲಿನ ಸುಭಾಷನ ಅಧಿಕೃತ ನಿವಾಸಕ್ಕೆ ಆಗಮಿಸಿದಾಗ ನನ್ನ ಜೀವನವು ದುರಂತದ ತಿರುವು ತೆಗೆದುಕೊಂಡಿತು. ಆಗ ನಾನು ಎರಡನೆಯ ಮಗುವಿನ ಗರ್ಭಿಣಿಯಾಗಿದ್ದೆ. ತುಂಬು ಗರ್ಭಿಣಿ ಬೇರೆ. ಗರ್ಭವು ಆಕಸ್ಮಿಕವಾಗಿ ಸಂಭವಿಸಿತ್ತಲ್ಲದೇ ನಾನು ಗರ್ಭಪಾತಕ್ಕೆ ವಿರೋಧಿಯಾಗಿದ್ದುದರಿಂದ ಅದನ್ನು ಹೊರಹಾಕಲು ಇಷ್ಟಪಡಲಿಲ್ಲ. ಅಲ್ಲದೇ ನಿಶಿತನಿಗೆ ಆಟವಾಡಲು ಒಳ್ಳೆಯ ಸಂಗಾತಿ ದೊರೆಯುತ್ತಾನೆಂದು ಆಶಿಸಿದೆ. ಎಲ್ಲ ದುಃಖವನ್ನೂ ಮೌನವಾಗಿ, ಹತಾಶಳಾಗಿ ಅನುಭವಿಸುತ್ತಿದ್ದೆ.

ನನ್ನ ಎರಡನೆಯ ಮಗ ನಿಹಿತ್ 9 ಜೂನ್, 1994ರಂದು ಜನಿಸಿದ. ನನ್ನ ಬದುಕಿನಲ್ಲಿ ಮತ್ತೆ ಸಂತಸದ ಅಲೆಗಳನ್ನು ತಂದ. ಅಕ್ಟೋಬರ್ 94ರಲ್ಲಿ ನನ್ನ ಅತ್ತೆ ತೀರಿಹೋದ ನಂತರ ಸುಭಾಷ್ ಇನ್ನಷ್ಟು ಕ್ರೂರಿಯಾದ. 1995 ಏಪ್ರಿಲ್ 4ರಂದು ಸುಭಾಷ್ ನನ್ನನ್ನು ರೂರ್ಕೆಲಾದಲ್ಲಿನ 'ಪ್ರಶಾಂತಿ' ಎಂಬ ಮಾನಸಿಕ ರೋಗಿಗಳ ನರ್ಸಿಂಗ್ ಹೋಂಗೆ ಸೇರಿಸಿದ್ದ. ನಾನು ಎಲ್ಲ ರೀತಿಯಿಂದ ಸ್ವಸ್ಥಳಾಗಿದ್ದರೂ ನನ್ನ ಗಂಡ ಮತ್ತು ಅತ್ತೆ,

ಮನೆಯವರು ನಾನು ಮಾನಸಿಕ ಅಸ್ವಸ್ಥಳು ಎಂದು ಸಾಬೀತುಪಡಿಸಲು ಏನೆಲ್ಲ ನಾಟಕವಾಡಿದರು. ಏಪ್ರಿಲ್ 6ರಂದು ಆಸ್ಪತ್ರೆಯಿಂದ ಮನೆಗೆ ಬಂದೆ. ನಂತರ ಏಪ್ರಿಲ್ 10ರವರೆಗೆ ನನಗೆ ನಿದ್ರಾಜನಕ ಹಾಗೂ ಮತ್ತು ಬರಿಸುವ ಔಷಧಿಗಳನ್ನು ನೀಡಲಾಗುತ್ತಿತ್ತು. ಅದರಿಂದಾಗಿ ನನ್ನಲ್ಲಿ ಭೀತಿ ಹಾಗೂ ಭ್ರಾಂತಿ ಉಂಟಾದುದರಿಂದ ಮತ್ತೆ ಅದೇ ನರ್ಸಿಂಗ್ ಹೋಂಗೆ ಸೇರಿಸಲಾಯಿತು. ವೈದ್ಯರ ಕೈ ಬೆಚ್ಚಗೆ ಮಾಡಿದ್ದರಿಂದ ನನ್ನ ಅತ್ತೆ ಮನೆಯವರು ಹೇಳಿದಂತೆ ಅವರು ಕೇಳುತ್ತಿದ್ದರು.

ನನ್ನ ನೋವು ಮತ್ತು ಅಸಹಾಯಕತೆಗಳನ್ನು ಯಾರಾದರೂ ಊಹಿಸಲು ಸಾಧ್ಯವೆ? ಸ್ವಸ್ಥಳನ್ನು ಮಾನಸಿಕ ಅಸ್ವಸ್ಥಳೆಂದು ಸಾಬೀತುಪಡಿಸಲು ನನಗೆ ಆರು ಬಾರಿ ವಿದ್ಯುತ್ ಶಾಕ್ ಚಿಕಿತ್ಸೆ ನೀಡಲಾಯಿತು. 'ಶಾಕ್' ಚಿಕಿತ್ಸೆಯ ನಂತರ ನನ್ನ ಜ್ಞಾಪಕಶಕ್ತಿ ನಶಿಸಿ ಹೋಗಿತ್ತು. ನಾನು ಯಾರೆಂಬುದೇ ಮರೆತುಹೋಗಿತ್ತು. ಹೃದಯ ಒಡೆದು ಚೂರಾಗಿತ್ತು, ನಡಗುತ್ತಿದ್ದೆ. ನನ್ನ ಮೇಲೆ ಆತ್ಮೀಯತೆ ಬೆಳಸಿಕೊಂಡಿದ್ದ ಆಸ್ಪತ್ರೆಯ ನರ್ಸೊಬ್ಬಳು ನನ್ನ ತವರುಮನೆಗೆ ಅನಾಮಧೇಯ ಕರೆ ಮಾಡಿ ವಿಷಯವನ್ನೆಲ್ಲ ತಿಳಿಸಿದ್ದರಿಂದ ನನ್ನ ತಂದೆ ತಾಯಿಯರು ಓಡೋಡಿ ಬಂದರು.

ಮಕ್ಕಳನ್ನು ತನ್ನೊಡನೆ ಬಿಟ್ಟು ತವರು ಮನೆಗೆ ಹೋಗುವಂತೆ ಸುಭಾಷ್ ತಿಳಿಸಿದ. ನರೆತರ ಅವರನ್ನ ಕಳಿಸುವುದಾಗಿ ಪ್ರಮಾಣ ಮಾಡಿದ. ಹತ್ತು ತಿಂಗಳ ಕಾಲ ನಾನು ಸಹನೆಯಿಂದ ಕಾದೆ. ನನಗೆ ಮಕ್ಕಳೊಡನೆ ದೂರವಾಣಿ ಮೂಲಕವೂ ಮಾತಾಡಲು ಬಿಡಲಿಲ್ಲ. ನನ್ನ ಬಂಧುಗಳಲ್ಲೊಬ್ಬರು ಪ್ರಯತ್ನಪಟ್ಟು ಸಂಧಾನಕ್ಕೆ ಹೋದಾಗ ಅವರ ಬಳಿ, ನಾನು ಎರಡು ವರ್ಷ ಮಕ್ಕಳಿಂದ ದೂರ ವಾಗಿರಬೇಕು, ಇದಕ್ಕೊಪ್ಪಿದರೆ ಮಾತ್ರ ನಂತರ ನಾನು ಮಕ್ಕಳ ಬಳಿ ವಾಪಸ್ಸು ಹೋಗಬಹುದೆಂದು ತಿಳಿಸಲಾಗಿತ್ತು.

ನನ್ನ ಎರಡು ಮಕ್ಕಳ ನೆನಪುಗಳು, ಅದರಲ್ಲೂ ವಿಶೇಷವಾಗಿ, ದೂರವಾಗುವಾಗ ಹಾಲು ಕುಡಿಯುತ್ತಿದ್ದ ಚಿಕ್ಕ ಮಗುವಿನ ನೆನಪು ಗಂಡನ ಮನೆಗೆ ವಾಪಸ್ಸು ಹೋಗಬೇಕೆಂಬ ನಿರ್ಧಾರ ತಳೆಯುವಂತೆ ಮಾಡಿತು. ನಾನು ನನ್ನ ಭಾವನೆಗಳನ್ನು ನೋವನ್ನು, ವಿದ್ಯುತ್ ಶಾಕ್ ಚಿಕಿತ್ಸೆಯಿಂದಾದ ಆಘಾತ ಮತ್ತು ನರ್ಸಿಂಗ್ ಹೋಂನಲ್ಲಿನ ಕೆಟ್ಟ ಅನುಭವಗಳು ಎಲ್ಲವನ್ನೂ ಬದಿಗೊತ್ತಿ 1996 ಜನವರಿ 30ರಂದು ಅಲ್ಲಿಗೆ ಹೋದೆ. ಇದರ ಫಲವಾಗಿ ಕಠಿಣ ನಿರ್ಧಾರದ ಘಟನೆಗಳು ನಡೆದು ಅನೇಕ ದುರಂತಗಳು ನಡೆದುಹೋದವು.

ಮೊಟ್ಟಮೊದಲು ನನ್ನ ಹಾಗೂ ನನ್ನ ತಂದೆಯವರ ವಿರುದ್ಧ ವಂಚನೆಯ ವಿಷಯವಾಗಿ ಅಫಿಡವಿಟ್ ಮಾಡಿಸಲು ಒತ್ತಾಯಪಡಿಸಲಾಯಿತು. ನನ್ನ ತಂದೆ ತಾಯಿಯರ ವಿರುದ್ಧ ಕಟಕನಲ್ಲಿ ಕ್ರಿಮಿನಲ್ ಕೇಸ್ ಹಾಕಲು ಮುಂದುವರೆದರು. ನನ್ನನ್ನು ಜೂನ್ 1996ರಲ್ಲಿ ಬಲವಂತವಾಗಿ ಬ್ರಹ್ಮಕುಮಾರಿ ಯಾಗಿ ಮಾಡಲು ಪ್ರಯತ್ನ ನಡೆಸಿದರು. ಬ್ರಹ್ಮಕುಮಾರಿ ಸಮಾಜದ ಮುಖ್ಯಸ್ಥಳ ಮೌಂಟ್‌ಅಬುಗೆ ಕರೆದೊಯ್ದು ಅಲ್ಲಿ ಸೇರಿಸುವುದಾಗಿ, ಅಲ್ಲಿನ ದಾಖಲು ಪುಸ್ತಕದಲ್ಲಿ ಕಾನೂನಿನ ಪ್ರಕಾರ ಮದುವೆಯಾಗಿದ್ದು ಎರಡು ಮಕ್ಕಳನ್ನು ಹೊಂದಿರು ವವಳನ್ನು 'ಅವಿವಾಹಿತೆ' ಎಂದು ನಮೂದಿಸಲಾಗಿತ್ತು.

ಈ ಎಲ್ಲ ಯೋಜನೆಗಳು ತಲೆಕೆಳಕಾದಾಗ ಸಜೀವವಾಗಿಯೇ ಕೊನೆಗಾಣಿಸಬೇಕೆಂದು ಅವನ ಪೈಶಾಚಿಕ ಪ್ರವೃತ್ತಿಗೆ ಮತ್ತೊಂದು ಯೋಜನೆ ಹೊಳೆಯಿತು. ಸುಭಾಷ್ ವಿಶೇಷ ಮುತುವರ್ಜಿಯಿಂದ ದೇಶದ ಅತ್ಯಂತ ಪ್ರತಿಷ್ಠಿತ ಹುಚ್ಚಾಸ್ಪತ್ರೆಯಲ್ಲಿ, ರಾಂಚಿಯ ಕಾಂತೆಯ ಪ್ರಧಾನ ಮಾನಸಿಕ ರೋಗಿಗಳ ಸಂಸ್ಥೆಯಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಕೂಡಿಹಾಕಿದ.

ಭಯದ ವಾತಾವರಣದಲ್ಲಿ, ದಾರುಣ ಪರಿಸ್ಥಿತಿಯಲ್ಲಿ ಮತ್ತು ಮೂರ್ಖರ ಮಂದಿರದಲ್ಲಿ ಬಂಧಿತಳಾದೆ. ನನಗೆ ಕೇವಲ 'ಖಿನ್ನತೆ'ಗಾಗಿ ಕೆಲವು ದಿನಗಳು ಚಿಕಿತ್ಸೆ ಕೊಡಲಾಗುತ್ತದೆ. ನಂತರ ವಾಪಸ್ಸು ಹೋಗಿ ಮಕ್ಕಳ ಜೊತೆಗೆ ಸದಾ ಸಂತೋಷದಿಂದ ಜೀವನ ನಡೆಸಬಹುದೆಂದು ರಾಂಚಿಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಲು ಸಿದ್ಧಳಿದ್ದೇನೆ ಎಂದು ನನ್ನಿಂದ ಬರೆಸಿಕೊಂಡರು.

ಆಸ್ಪತ್ರೆಯ ಅಧಿಕಾರಿಗಳು ಏಳನೆಯ ದಿನ ಸುಭಾಷನಿಗೆ ನಾನು ಸ್ವಸ್ಥಳಾಗಿದ್ದೇನೆಂದು, ವಾಪಸ್ಸು ಕರೆದೊಯ್ಯಬೇಕೆಂದು ಪತ್ರ ಬರೆದರೂ ಸಹ ಅವನು ಬರಲಿಲ್ಲ. ವಿಷಯವೆಂದರೆ, ರಾಜ್ಯ ಮಾನವ ಹಕ್ಕು-ಸಂರಕ್ಷಣಾ ಸಮಿತಿಯವರೂ ಮನುಷ್ಯಳಾಗಿ ನನ್ನ ಹಕ್ಕು ರಕ್ಷಿಸುವಲ್ಲಿ ವಿಫಲವಾಗಿದ್ದಾರೆ. ಏಕೆಂದರೆ ಮಾನವ ಹಕ್ಕು ಸಂರಕ್ಷಣಾ ಸಮಿತಿಯವರಿಗೆ ಸಂಪೂರ್ಣ ಮಾಹಿತಿ ನೀಡಿಯೇ ರಾಂಚಿಗೆ ಕರೆದುಕೊಂಡು ಬಂದಿದ್ದರು. ಅವರು ಮೊದಲೇ ಸುಭಾಷ ರಾಂಚಿಯಿಂದ ಕರೆದೊಯ್ದ ಪಕ್ಷದಲ್ಲಿ ತಾವೇ ವಾಪಸ್ಸು ಕರೆದೊಯ್ಯುತ್ತೇನೆಂದು ತಿಳಿಸಿದ್ದರು.

ಸಂಸ್ಥೆಯು ಆಸ್ಪತ್ರೆಯಿಂದ ಕರೆದೊಯ್ಯಬೇಕೆಂದು

ಮೇಲಿಂದ ಮೇಲೆ ಪತ್ರಗಳನ್ನು ಸುಭಾಷನಿಗೆ, ರಾಜ್ಯ ಮಾನವ ಹಕ್ಕು ಸಂರಕ್ಷಣಾ ಸಮಿತಿಗೆ ಮತ್ತು ತಂದೆಯವರಿಗೆ ಬರೆಯುತ್ತಿದ್ದರೂ ಒಬ್ಬರಿಂದಲೂ ಪ್ರತಿಕ್ರಿಯೆ ಬರಲಿಲ್ಲ. ನಾನು ಕನಿಷ್ಟವೆಂದರೂ ಮೂವತ್ತು ಪತ್ರಗಳನ್ನು ಸುಭಾಷ ಹಾಗೂ ತಂದೆಯವರಿಗೆ ಇಲ್ಲಿಂದ ಆದಷ್ಟು ಬೇಗ ಪಾರು ಮಾಡಬೇಕೆಂದು ಬರೆದೆ. ಸುಭಾಷನಿಂದ ಯಾವುದೇ ಪ್ರತಿಕ್ರಿಯೆ ಕಂಡುಬರಲಿಲ್ಲ. ತಂದೆ ಮಾತ್ರ ಮಾನವ ಹಕ್ಕು ಸಂರಕ್ಷಣಾ ಸಮಿತಿಯ ಮುಖಾಂತರ ಪ್ರತಿಕ್ರಿಯಿಸಿದರು. ಮಾನವ ಹಕ್ಕು ಸಂರಕ್ಷಣಾ ಸಮಿತಿಯವರು ಎರಡು ತಿಂಗಳ ಬಳಿಕ ಪೋಲಿಸ್ ಇನ್ಸ್‌ಪೆಕ್ಟರ್ ಬಿದ್ಯುಲ್ಲತಾ ನಾಯಕ್‌ರನ್ನು ಪರಿಶೀಲನೆ ನಡೆಸಲು ಕಳಿಸಿತು. ಅವರು ನನ್ನ ಜೊತೆಗೆ ಹಾಗೂ ವೈದ್ಯರೊಡನೆ ಚರ್ಚೆ ಮಾಡಿ ನಾನು ಸ್ವಸ್ಥಳಾಗಿದ್ದೇನೆಂದು ಮನವರಿಕೆ ಮಾಡಿಕೊಟ್ಟಿದ್ದರಿಂದ ಹತ್ತು ದಿನಗಳಲ್ಲಿಯೇ ಅಲ್ಲಿಂದ ಕರೆದೊಯ್ಯುತ್ತೇನೆಂದು ತಿಳಿಸಿ ಹೋದದ್ದಷ್ಟೆ. ಅವರಿಂದ ವಿಷಯ ತಿಳಿಯಲು ನಾನು ವ್ಯರ್ಥವಾಗಿ ಕಾಯುತ್ತಿದ್ದೆ.

ಮಾನವ ಹಕ್ಕು ಸಂರಕ್ಷಣಾ ಸಮಿತಿ ನನ್ನ ತಂದೆಯ ಮಾತಿಗೆ ಕಿವಿಗೊಡದೇ ಸೋಮಾರಿತನದಿಂದ ವರ್ತಿಸಿದಾಗ ಅವರು ರಾಜ್ಯದಲ್ಲಿ ಮುಂಚೂಣಿಯಲ್ಲಿರುವ ಮಹಿಳಾ ಸಂಘ ಉತ್ಕಲ ಮಹಿಳಾ ಸಮಿತಿಯನ್ನು ಸಂಪರ್ಕಿಸಿ ಅವರು ತಕ್ಷಣವೇ ಕಾರ್ಯ ಪ್ರವೃತ್ತರಾಗಿ ಮಾನವ ಹಕ್ಕು ಸಂರಕ್ಷಣಾ ಸಮಿತಿಯ ಮೇಲೆ ಒತ್ತಡ ತಂದು ನನ್ನನ್ನು ರಾಂಚಿಯಿಂದ ಬಿಡುಗಡೆಗೊಳಿಸಿದರು. ನಾನು ಒಂಬತ್ತು ತಿಂಗಳು ಮತ್ತು ಹತ್ತು ದಿನ ಭಯಾನಕ ಹುಚ್ಚರ ಸಂತೆಯಲ್ಲಿ, ಅಂಧಕಾರದಲ್ಲಿ ಕಳೆದೆ. ಆಸ್ಪತ್ರೆಗೆ ಸೇರಿಸುವಾಗ ಸುಭಾಷ್ ಕೊಟ್ಟಿದ್ದ ನೂರು ರೂಪಾಯಿ ಬಿಟ್ಟರೆ ನನ್ನ ಬಳಿ ಇನ್ನೇನೂ ಇರಲಿಲ್ಲ. ಏಳು ತಿಂಗಳ ಕಾಲ ನಾನು ಸೋಪು, ಟೂತ್‌ಪೇಸ್ಟ್, ಶಾಂಪೂ, ಡಿಟರ್ಜೆಂಟ್ ಯಾವುದೂ ಇಲ್ಲದೇ ದಿನಗಳನ್ನು ನೂಕಿದೆ. ರಾಂಚಿಯ ಚಳಿಗಾಲ ಅನುಭವಿಸಿದವರಿಗೇ ಗೊತ್ತು. ಮೈ ನಡುಗಿಸುವ, ಗದಗುಟ್ಟಿಸುವ ವಿಪರೀತ ಚಳಿ, ಕೂಳಿರ್ಗಾಳಿ ತಡೆದುಕೊಳ್ಳಲು ನನ್ನ ಬಳಿ ಸ್ವೆಟರ್ ಕೂಡ ಇರಲಿಲ್ಲ.

ರಾಂಚಿಯಿಂದ ನಾನು 'ಬಸುಂಧರಾ'ಗೆ ವರ್ಗಾಯಿಸಲ್ಪಟ್ಟೆ. ಅದು ಅನಾಥರ, ದಿಕ್ಕಿಲ್ಲದವರ ಮನೆಯಾಗಿತ್ತು. ಮಾನವ ಹಕ್ಕು ಸಂರಕ್ಷಣಾ ಸಮಿತಿಯವರು 1997ರ ಏಪ್ರಿಲ್ 27ರಂದು ಅಲ್ಲಿಗೆ ಕರೆದುಕೊಂಡು ಬಂದರು. ಬಸುಂಧರಾದ ಕಾರ್ಯದರ್ಶಿ, ಸೈಲಾ ಬೆಹೆರಾರವರ ಪರಿಚಯವಾದ ಆ ಕ್ಷಣವನ್ನು ಮತ್ತು ನನ್ನ ಜೀವನದಲ್ಲಿ ಹೊಸ ಹುರುಪಿನ ಗಾಳಿಯನ್ನು ತಂದಿದ್ದನ್ನು ನಾನೆಂದೂ ಮರೆಯಲು ಸಾಧ್ಯವೇ ಇಲ್ಲ. ನಾನು ಆಕೆಗೆ ಹೇಳಿದ್ದಿಷ್ಟೇ "ನಾನು ಅಂಜನಾ ಮಿಶ್ರಾ, ರಾಂಚಿಯಿಂದ ಬಂದಿದ್ದೇನೆ". ಕಣ್ಣೀರು ಕೋಡಿಯಾಗಿ ಹರಿಯಿತು. ತವರು ಮನೆಗೆ ಬಂದಾಗ ಮಗಳಿಗಾಗುವಂತಹ ಅನುಭವವಾಗಿ ಆಕೆ ನನ್ನ ತಾಯಿ ಅನ್ನಿಸಿತು. ಆಕೆ ತನ್ನ ತೋಳುಗಳಲ್ಲಿ ನನ್ನನ್ನು ಆಲಂಗಿಸಿಕೊಂಡಾಗ ಎಲ್ಲವೂ ಆಕೆಗೆ ಅರ್ಥವಾಗಿದೆಯೆಂದು ಆಕೆಯ ಬೆಚ್ಚಗಿನ ಸ್ಪರ್ಶದಲ್ಲಿಯೇ ತಿಳಿಯಿತು. ನಾನು ಸರಿಯಾದ ಆಹಾರವಿಲ್ಲದೇ, ನ್ಯೂನ ಪೋಷಣೆಯಿಂದ ನಡುಗುತ್ತಿದ್ದೆ ಮತ್ತು ಬಹಳ ನಿಶ್ಯಕ್ತಳಾಗಿದ್ದೆ. ನಿಲ್ಲಲು ತ್ರಾಣವಿರಲಿಲ್ಲ.

ಸುಭಾಷ್, ರಾಜಲಕ್ಷ್ಮಿ ಮತ್ತು ಇತರ ಕುಟುಂಬದ ಸದಸ್ಯರ ಮೇಲೆ 1997 ಮೇ 30ರಂದು ಪ್ರಥಮ ಮಾಹಿತಿ ವರದಿ (FIR) 498A ಕಾಲಂನಲ್ಲಿ ಸಲ್ಲಿಸಿದೆ. ಸುಭಾಷ್ ಮತ್ತು ರಾಜಲಕ್ಷ್ಮಿಯನ್ನು ಬಂಧಿಸಿ 4 ದಿನಗಳ ಕಾಲ ಬಂಧನ ದಲ್ಲಿಡಲಾಯಿತು. ಅವರಿಗೆ ಜಾಮೀನು ನಿರಾಕರಿಸಲಾಯಿತು.

ಕೇಂದ್ರ ಕಛೇರಿಯ ಡಿ.ಐ.ಜಿ. ಎಸ್. ಎನ್. ಸ್ವೇನ್‌ರವರು ರಾಜ್ಯದಲ್ಲಿ ಅತ್ಯಂತ ಪ್ರಾಮಾಣಿಕ ಹಾಗೂ ನ್ಯಾಯಯುತ ಅಧಿಕಾರಿ ಎಂದು ಹೆಸರು ಪಡೆದವರು. ಈ ತನಿಖೆ ಕೈಗೆತ್ತಿಕೊಂಡರು. ಅವರು ಬಹಳ ನಿಧಾನಗತಿಯಲ್ಲಿ ತನಿಖೆ ನಡೆಸುತ್ತಿದ್ದರು. 1997 ಜುಲೈ 2ರಂದು ನನ್ನನ್ನು ಹೈಕೋರ್ಟಿಗೆ ಬರಲು ಆದೇಶಿಸಿದರು. ಮುಖ್ಯ ನ್ಯಾಯಾಧೀಶರ ಮುಂದೆ ನನ್ನನ್ನು ಹಾಜರು ಪಡಿಸುತ್ತೇನೆಂದು ಅಡ್ವೋಕೇಟ್ ಜನರಲ್ ಹೇಳಿದರು. ನಾನು ಸೈಲಾ ಬೆಹೆರಾ ಜೊತೆಗೆ ಅಡ್ವೋಕೇಟ್ ಜನರಲ್ ಇಂದ್ರಜಿತ್ ರೇ ಅವರನ್ನು ಹೈಕೋರ್ಟ್ ಚೇಂಬರಿನಲ್ಲಿ ಮೊದಲ ಬಾರಿಗೆ ಭೇಟಿಯಾದೆ. ಅವರು ಬಹಳ ಸಭ್ಯ ವ್ಯಕ್ತಿಯಂತೆ ಕಂಡುಬಂದರಲ್ಲದೇ ನನ್ನ ವಿಷಯದಲ್ಲಿ ತಮಗಾದ ನೋವು, ಆಘಾತವನ್ನು ವ್ಯಕ್ತಪಡಿಸಿದರಲ್ಲದೇ ನನಗೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡುವುದಾಗಿ ಭರವಸೆಯಿತ್ತರು.

1997 ಜುಲೈ 11 ನನ್ನ ಪಾಲಿಗೆ ದುರದೃಷ್ಟದ ದಿನ. ನನಗೆ ಸುಭಾಷ್‌ನ ಮೊಕದ್ದಮೆಯಲ್ಲಿ ರಾಜ್ಯದಿಂದ ನಿಯಮಿಸಲ್ಪಟ್ಟ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿತಂಬರ ಆಚಾರ್ಯ ರವರಿಂದ ಕರೆ ಬಂತು. ಅವರು ತಕ್ಷಣವೇ ನಾನು ದೂರವಾಣಿಯ ಮೂಲಕ ಇಂದ್ರಜಿತ್ ರೇ ಅವರನ್ನು ಸಂಪರ್ಕಿಸಬೇಕೆಂದು

ತಿಳಿಸಿದರು. ನಾನು ರೇ ಅವರನ್ನು ಸಂಪರ್ಕಿಸಿದಾಗ ಅವರು ಮೊಕದ್ದಮೆಯಲ್ಲಿನ ಕೆಲವು ಮುಖ್ಯ ಬೆಳವಣಿಗೆಗಳ ಬಗ್ಗೆ ಚರ್ಚೆ ಮಾಡಬೇಕೆಂದೂ, ಹಾಗೆಯೇ ನನ್ನೊಡನೆ ಲಂಚ್ ತೆಗೆದುಕೊಳ್ಳುವುದಕ್ಕಾಗಿ ಕಾಯುತ್ತಿರುವುದಾಗಿ ತಿಳಿಸಿದರು. ಪಿತಂಬರ ಆಚಾರ್ಯರವರ ಹೇಳಿಕೆ ಮತ್ತು ಇಂದ್ರಜಿತ್ ರೇ ಅವರೊಂದಿಗೆ ಚರ್ಚಿಸಲು ಹೊರಟಿರುವ ವಿಷಯವನ್ನು ಸೈಲಾ ಬೆಹರಾಗೆ ತಿಳಿಸಿ ಬಸುಂಧರಾದ ಉದ್ಯೋಗಸ್ಥೆ ಡಾಲಿಯ ಜೊತೆಗೂಡಿ ಇಂದ್ರಜಿತ್ ರೇ ಅವರ ನಿವಾಸಕ್ಕೆ ತೆರಳಿದೆ. ಅವರು ತಮ್ಮ ಮನೆಯಲ್ಲಿ ನನ್ನ ಮೇಲೆ ಬಲಾತ್ಕಾರದಿಂದ ಮಾನಭಂಗ ಮಾಡಲು ಪ್ರಯತ್ನಿಸಿದರು. ನಾನು ಹಾಗೂ ಹೀಗೂ ಅಲ್ಲಿಂದ ಪಾರಾಗುವ ಬಗೆ ಯೋಚಿಸುತ್ತಿದ್ದೆ. ಬಾಗಿಲು ತಟ್ಟಿದ ಸದ್ದಾದಾಗ ರೇ ಅವರು ನನ್ನ ಮೇಲಿನ ತಮ್ಮ ಹಿಡಿತವನ್ನು ಸಡಿಲಿಸಿದಾಗ ಅಲ್ಲಿಂದ ನಾನು ಜಾರಿಕೊಂಡು ಹೊರಗೋಡಿ ಬಂದೆ.

ನನಗೆ ನ್ಯಾಯ ಸಿಗದಿದ್ದುದಕ್ಕೆ ಮತ್ತು ನಮ್ಮ ಪ್ರಥಮ ಮಾಹಿತಿ ವರದಿ (FIR) ದಾಖಲಾಗಿರದುದಕ್ಕೆ ಡಿ.ಐ.ಜಿ. ಸ್ವೇನ್‌ರವರ ಸಲಹೆಯ ಮೇರೆಗೆ ನನ್ನ ಮೇಲೆ ನಡೆದ ದೌರ್ಜನ್ಯದ ವಿರುದ್ಧ ನ್ಯಾಯ ದೊರಕಿಸಿಕೊಡುವಂತೆ ಮುಖ್ಯಮಂತ್ರಿಯವರನ್ನು ಕಂಡು ಬಿನ್ನವಿಸಿಕೊಂಡು ಅರ್ಜಿ ಸಲ್ಲಿಸಿದೆವು. ನನಗೆ ಹಾಗೂ ನನ್ನ ಜೊತೆಗೆ ಬಂದ ಮಹಿಳಾ ಕಾರ್ಯಕರ್ತೆಯರಿಗೆ ಮುಖ್ಯಮಂತ್ರಿಗಳು ನ್ಯಾಯ ದೊರಕಿಸಿಕೊಡುತ್ತೇನೆಂದು ಆಶ್ವಾಸನೆ ಕೊಟ್ಟರೂ ಕೂಡ ಜುಲೈ 18ರಂದು ದೆಹಲಿಯಿಂದ ವಾಪಸ್ಸು ಬಂದ ನಂತರ ಅವರ ವರಸೆಯೇ ಬದಲಾಯಿತು. ಅವರ ಕಛೇರಿಯಿಂದ ರಾಜಿ ಸಂಧಾನಕ್ಕಾಗಿ ನನ್ನ ಮೇಲೆ ಒತ್ತಡ ತರಲಾಯಿತು.

ದಿಟ್ಟತನದಿಂದ 1997ರ ಜುಲೈ 19ರಂದು ಕಟಕ್‌ನ ಕಂಟೋನ್ಮೆಂಟ್ ಪೋಲಿಸ್ ಸ್ಟೇಷನ್‌ನಲ್ಲಿ ದೌರ್ಜನ್ಯದ ವಿರುದ್ಧ FIR ಸಲ್ಲಿಸಿದೆ. ಪ್ರಾರಂಭದಲ್ಲಿಯೇ ಪೋಲಿಸರಿಂದ ಬಲವಾದ ಪ್ರತಿಭಟನೆ ಕಂಡುಬಂತು. ಹೇಗೆಂದರೆ ಅಸಲು FIRನಲ್ಲಿನ ಕಾಲಂ 376/511, ಇದು ಅತ್ಯಾಚಾರಕ್ಕೆ ಪ್ರಯತ್ನಿಸಿದ್ದಕ್ಕೆ ಸಂಬಂಧಿಸಿದ್ದು, ಅದನ್ನು ಹರಿದುಹಾಕುವುದಕ್ಕೆ ಪ್ರಯತ್ನ ನಡೆಯುತ್ತಿತ್ತು. ಅದನ್ನು ಹೊರತು ಪಡಿಸಿ ಕಲಂ 354 ಅಡಿಯಲ್ಲಿ ದೌರ್ಜನ್ಯದ ವಿರುದ್ಧ ಮಾತ್ರ ದಾಖಲು ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದರು.

ನಾನು ಏಕಾಂಗಿಯಾಗಿ ನಡೆಸಿದ ಹೋರಾಟ, ಇಡೀ ವ್ಯವಸ್ಥೆಯ ವಿರುದ್ಧ, ಮುಖ್ಯಮಂತ್ರಿ ಜೆ. ಬಿ. ಪಟ್ನಾಯಕ್‌ರು, ಬಹಿರಂಗವಾಗಿ ಇಂದ್ರಜಿತ್ ರೇಗೆ ಬೆಂಬಲ ವ್ಯಕ್ತ ಪಡಿಸುತ್ತಿದ್ದುದರ ವಿರುದ್ಧ, ಎಂದೂ ಶಾಂತಿಯುತವಾಗಿರಲಿಲ್ಲ. ಒಂದು ನೆಮ್ಮದಿಗೊಳಿಸುವ ಪ್ರಕರಣ ಜರುಗಿದ್ದೆಂದರೆ ಹೈಕೋರ್ಟ್ CBI ತನಿಖೆಗೆ ಆದೇಶ ನೀಡಿದಾಗ ಮತ್ತು ಇಂದ್ರಜಿತ್‌ರೇಯ ಮೇಲೆ ನವೆಂಬರ್ 1997ರಂದು ಅತ್ಯಾಚಾರಕ್ಕೆ ಪ್ರಯತ್ನಿಸಿದುದರ ವಿರುದ್ಧ ಚಾರ್ಜ್‌ಶೀಟ್ ಹಾಕಲಾಯಿತು. ಇಷ್ಟೆಲ್ಲ ಆದರೂ ಅವರು ಆಗಸ್ಟ್ 1998ರವರೆಗೆ ಅಡ್ವೋಕೇಟ್ ಜನರಲ್ ಆಗಿಯೇ ಸೇವೆಯಲ್ಲಿ ಮುಂದುವರೆದರು. ಅವರಿಗೆ ಮುಖ್ಯಮಂತ್ರಿಯವರ ಸಂಪೂರ್ಣ ಬೆಂಬಲವಿತ್ತು. ಅವರು ನಿರೀಕ್ಷಣಾ ಜಾಮೀನಿಗೆ ವ್ಯವಸ್ಥೆ ಮಾಡಿಕೊಂಡಿದ್ದರು. ಸಾರ್ವಜನಿಕರಿಂದ, ಮಾಧ್ಯಮಗಳಿಂದ ವಿರೋಧ ವ್ಯಕ್ತವಾದಾಗ ಮತ್ತು ಆಡಳಿತ ಪಕ್ಷದ ಕೆಲವು ಸದಸ್ಯರು ಪಟ್ಟು ಹಿಡಿದು ಅವರನ್ನು ಉಚ್ಚಾಟನೆ ಮಾಡಬೇಕೆಂದು ಒತ್ತಾಯ ತಂದಾಗ ಆಗಸ್ಟ್ 1998ರಲ್ಲಿ ರಾಜೀನಾಮೆ ನೀಡಿದರು.

ನನಗೆ ರೇ ಹಾಗೂ ಮುಖ್ಯಮಂತ್ರಿಯ ಕಡೆಯ ಜನರಿಂದ ಸಂಧಾನ ಮಾಡಿಕೊಳ್ಳಬೇಕೆಂದು ಪ್ರಸ್ತಾಪಗಳು ಬಂದವು. ನಾನು ಅದಕ್ಕೆ ದಿಟ್ಟತನದಿಂದ ಒಪ್ಪದೇ ಇದ್ದಾಗ ಸುಭಾಷನೊಂದಿಗೆ ಸಂಧಾನ ಮಾಡಿಕೊಳ್ಳುವುದಕ್ಕೆ ಹಾಗೂ ಅದರ ಮೂಲಕ ರೇಯೊಂದಿಗೂ ರಾಜಿ ಮಾಡಿಕೊಳ್ಳಬೇಕೆಂಬ ವಿಷಯವನ್ನೂ ಪ್ರಸ್ತಾಪಕ್ಕೆ ತಂದರು. ನನಗೆ ಬೆದರಿಕೆ ಹಾಕಲಾಗಿದ್ದೇನೆಂದರೆ ಇದಕ್ಕೊಪ್ಪದಿದ್ದರೆ ನಾನು ಸಾಮೂಹಿಕ ಅತ್ಯಾಚಾರ ಕ್ಕೊಳಗಾಗಬಹುದು ಇಲ್ಲವೇ ನನ್ನ ಮುಖದ ಮೇಲೆ ಆಸಿಡ್ ಎರಚಲಾಗಬಹುದು ಇಲ್ಲವೇ ಒರಿಸ್ಸಾದಲ್ಲಿ ನಡೆದ ತಂದೂರ್ ಕೇಸ್‌ನ ಪುನರಾವೃತ್ತಿ ಆಗಬಹುದೆಂದು ಹೆದರಿಸಲಾಯಿತು.

ಬೆದರಿಕೆ ಹಾಗು ಒತ್ತಡಗಳಿಂದಾಗಿ ನನ್ನ ತಂದೆ ನನ್ನ ನಿವಾಸವನ್ನು ತಮ್ಮ ಮನೆಯಿಂದ ಅನಾಥಾಶ್ರಮಕ್ಕೆ ವರ್ಗಾಯಿಸಬೇಕೆಂದು ಹೈಕೋರ್ಟಿಗೆ ಅರ್ಜಿ ಸಲ್ಲಿಸುವಂತೆ ಮಾಡಿದವು. ನಾನು ಬಸುಂಧರಾದಿಂದ 1997 ಆಗಸ್ಟ್ 28ರಂದು ಭುವನೇಶ್ವರದ ನಯಾಪಲ್ಲಿಯ ಮನೆಗೆ ಹೋಗಿ ವಾಸವಾಗಿದ್ದ ಒಂದು ವರ್ಷದ ನಂತರ ಈ ಅರ್ಜಿ ಸಲ್ಲಿಸಿದ್ದರು. ನನ್ನ ವಕೀಲರು ಈ ಬೆಳವಣಿಗೆಯ ಬಗ್ಗೆ ವಿವರಿಸಿದಾಗ ನನಗಾದ ಆಘಾತ ವರ್ಣಿಸಲಸದಳ. ಒಂದು ಕ್ಷಣ ಮೆದುಳು ನಿಷ್ಕ್ರಿಯೆಗೊಂಡಿತು. ಆಳವಾದ ದುಃಖ ಆವರಿಸಿತ್ತು. ನನ್ನ ಕಾಲ ಅಡಿಯಲ್ಲಿ ಇಡೀ ಪ್ರಪಂಚವೇ ಕುಸಿಯುತ್ತಿರುವುದಾಗಿ

ಭಾಸವಾಯಿತು. ನನ್ನ ತಂದೆ ತಾಯಿ ನನಗೆ ವಿಶ್ವಾಸಘಾತ ಮಾಡುತ್ತಾರೆಂದು ನಾನೆಂದೂ ಊಹಿಸಿರಲಿಲ್ಲ, ಆ ಕ್ಷಣ ನಾನೆಷ್ಟು ಒಬ್ಬಂಟಿ ಎಂದು ನನಗರ್ಥವಾಯಿತು. ಭಯಾನಕ ಯುದ್ಧದ ವಿರುದ್ಧ ಹೋರಾಡುತ್ತಿರುವ ನನ್ನನ್ನು ದೇವರೊಬ್ಬನೇ ಉಳಿಸಬಲ್ಲ ಮತ್ತು ಅವನೊಬ್ಬನೇ ನನ್ನೊಳಗೆ ಶಕ್ತಿಯನ್ನು ತುಂಬಬಲ್ಲ ಎಂದುಕೊಂಡೆ. ಆಗ ನಾನು ಉಪವಾಸ ಸತ್ಯಾಗ್ರಹ ಮಾಡಲಾರಂಭಿಸಿದೆ. ನೀರು ಕೂಡ ಕುಡಿಯದೇ ಏಳು ದಿನ ಇದ್ದೆ. ನಂತರ ಮಹಿಳಾ ಸಂಘಟನೆಗಳ ಹೋರಾಟಗಾರ್ತಿಯರ ಒತ್ತಾಯದ ಮೇರೆಗೆ ನನ್ನ ಸತ್ಯಾಗ್ರಹ ನಿಲ್ಲಿಸಬೇಕಾಯಿತು. ನನ್ನ ಮೊದಲ ಜಯ ದೊರಕಿದ್ದು ನ್ಯಾಯಾಲಯ ನನ್ನ ತಂದೆಯ ಅರ್ಜಿಯನ್ನು ತಿರಸ್ಕರಿಸಿದ್ದಲ್ಲದೇ ಆ ಮನೆಯಲ್ಲಿ ವಾಸವಾಗಿರಲು ನನಗೆ ಅನುಮತಿ ನೀಡಿತ್ತು. ನ್ಯಾಯಾಲಯದ ತೀರ್ಪು ಹೇಳಿತ್ತು - "ಅಂಜನಾ ಒಬ್ಬ ಪ್ರಾಪ್ತ ವಯಸ್ಕಳು ಮತ್ತು ಆಕೆ ಎಲ್ಲಿ ಬೇಕಾದರೂ ವಾಸ ಮಾಡಬಹುದು".

ನನ್ನ ತಂದೆ ತಾಯಿಯರು ಮುಂಬಯಿಯಲ್ಲಿ ಹೊಸ ವೃತ್ತಿಯನ್ನು ಕೈಗೊಳ್ಳಲು ರಾಜ್ಯವನ್ನು ಬಿಟ್ಟು ಹೊರಡಬೇಕಾಯಿತು. ಆಗ ಅವರು ನನಗೆ ತಮ್ಮ ಮುಂಬಯಿಯ ಹೊಸ ವಿಳಾಸವನ್ನು ತಿಳಿಸುವ ಸೌಜನ್ಯವನ್ನು ತೋರಲಿಲ್ಲ. ಈಗಿರುವ ಮನೆಯ ಕೀಲಿಕೈಯನ್ನು ಕೊಟ್ಟರಲ್ಲದೇ ಏನನ್ನೂ ಹೇಳದೆ ಹೊರಟು ಹೋದರು. ನ್ಯಾಯಕ್ಕಾಗಿ ನಡೆಸುತ್ತಿರುವ ಈ ಹೋರಾಟದಲ್ಲಿ ನನ್ನ ಮನೆ, ಮಕ್ಕಳಿಂದ ದೂರವಾದದ್ದು ಮಾತ್ರವಲ್ಲ, ತಂದೆ-ತಾಯಿಯರೂ ದೂರವಾದರು.

ನನ್ನ ಪಾಲಿಗೆ ಉದ್ಯೋಗದ ಬಾಗಿಲುಗಳಂತೂ ಎಲ್ಲೆಡೆ ಮುಚ್ಚಿದ್ದವು. ಏಕೆಂದರೆ ನನಗೆ ಕೆಲಸ ಕೊಟ್ಟು ಮುಖ್ಯಮಂತ್ರಿಯನ್ನು ಎದುರು ಹಾಕಿಕೊಳ್ಳಲು ಅವರ್ಯಾರೂ ತಯಾರಿರಲಿಲ್ಲ. ನನ್ನ ತಂದೆಯ ಆದೇಶದಿಂದಲೇ ನನ್ನ ದೂರವಾಣಿಯ ಸಂಪರ್ಕ ಕಡಿದುಹಾಕಲಾಗಿತ್ತು. ನನ್ನ ತಂದೆ ದೂರವಾಣಿಯನ್ನು 'ತಾತ್ಕಾಲಿಕ ಸುರಕ್ಷಿತ ಕಸ್ಟಡಿ'ಯಲ್ಲಿಡಲು ದೂರವಾಣಿ ಇಲಾಖೆಯವರಿಗೆ ಬರೆದಿದ್ದರು. ಬೆದರಿಕೆ ಕರೆಗಳು ಬರುತ್ತಿದ್ದರೂ ಒಂಟಿಯಾಗಿ ಜೀವಿಸುತ್ತಿರುವ ಮಗಳ ರಕ್ಷಣೆಗೋಸ್ಕರವಾದರೂ ದೂರವಾಣಿ ಇದ್ದರೆ ಒಳ್ಳೆಯದೆಂದು ಅವರಿಗನ್ನಿಸಲಿಲ್ಲವೆ?

ಹಣಕಾಸಿನ ಮುಗ್ಗಟ್ಟಂತೂ ಹೇಳಲಿಕ್ಕೇ ಸಾಧ್ಯವಿಲ್ಲ. ಆರು ತಿಂಗಳು ಹೋರಾಟದಲ್ಲಿಯೇ ಕಳೆಯಿತು. ಅತ್ಯಂತ ನೋವಿನಿಂದ ಹತಾಶಳಾದ ತಾಯಿಯಾಗಿ ಮಕ್ಕಳಿಂದ ದೂರವಾಗಿ ತೀಕ್ಷ್ಣವಾದ ವೇದನೆಯಿಂದ ತತ್ತರಿಸುತ್ತ ಭೇಟಿಯ ಹಕ್ಕಿಗೋಸ್ಕರ ಹೈಕೋರ್ಟಿನಿಂದ ಬರುವ ಆದೇಶಕ್ಕಾಗಿ ಕಾಯುತ್ತಿದ್ದೆ. 1996 ಮೇ 6ರಂದು ಕೊನೆಯ ಬಾರಿಗೆ ನನ್ನ ಚಿಕ್ಕ ಮಗ ವಿಹಿತನನ್ನು ನೋಡಿದ್ದು ಮತ್ತು 1997 ಮೇ 14ರಂದು ನಿಶಿತನನ್ನು ಕೇವಲ ಹತ್ತು ನಿಮಿಷಗಳ ಕಾಲ ಡಿ.ಜಿ.ಪಿ., ಬಿ. ಬಿ. ಪಾಂಡಾರ ಕಛೇರಿಯಲ್ಲಿ ಕಂಡಿದ್ದೆ.

ನಾನು ನ್ಯಾಯವಾದಿ ಪಿ. ಕೆ. ಮಿಶ್ರರ ಕಛೇರಿಯಲ್ಲಿ ಜನವರಿ 6, 1999ರಂದು ನಡೆದ ಮರು ಹೊಂದಾಣಿಕೆ ಸಭೆಯಲ್ಲಿ ನಾನು ಮಾನ್ಯ ನ್ಯಾಯಾಧೀಶರಿಗೆ "ನನ್ನ ಮಕ್ಕಳನ್ನು ಭೇಟಿ ಮಾಡುವುದಕ್ಕೆ ಅವಕಾಶ ಕೊಡಿದಿದ್ದರೆ ನನಗೆ ಜೀವಿಸಲು ಕಷ್ಟವಾಗುತ್ತದೆ" ಎಂದು ವಿನಂತಿಸಿಕೊಂಡೆ. ಮಕ್ಕಳೊಡನೆ ನಾನು ದೂರವಾಣಿಯ ಮೂಲಕ ಮಾತನಾಡಲೂ ಅವಕಾಶವಿರಲಿಲ್ಲ. ನಾನು ಹೊಸ ವರ್ಷದ ಶುಭಾಶಯ ತಿಳಿಸಲು ಕನಿಷ್ಠ ಮೂವತ್ತು ಕರೆಗಳನ್ನಾದರೂ ಮಾಡಿದೆ. ಆದರೆ ಆ ಕರೆಗೆ ಓಗೊಡಲು ಮಕ್ಕಳನ್ನು ಬಿಡಲಿಲ್ಲ.

ನನ್ನ ವಕೀಲ ದೇಬಶೀಸ್ ಪಾಂಡರವರು ಹೈಕೋರ್ಟ್ ತಾತ್ಕಾಲಿಕ ಮಧ್ಯಂತರ ಆದೇಶ (Interim order) ನೀಡಿದೆಯೆಂದೂ ನಾನು ಶಾಲೆಯ ಪ್ರಿನ್ಸಿಪಾಲರಿಗೆ 7 ದಿನಗಳು ಮೊದಲೇ ತಿಳಿಸಿ ಫೆಬ್ರುವರಿ 15ರೊಳಗೆ ಮಕ್ಕಳನ್ನು ಭೇಟಿ ಮಾಡಬಹುದೆಂದು ತಿಳಿಸಿದರು. ನನಗೆ ತಿಳಿದುಬಂದ ಒಂದು ವರದಿಯ ಪ್ರಕಾರ ಭುವನೇಶ್ವರ CGM ಕೋರ್ಟ್‌ನಲ್ಲಿ ತಡೆಯಾಜ್ಞೆಯ ನ್ಯಾಯ ವಿಚಾರಣೆಯ ಪ್ರಗತಿ ಆಮೆ ಗತಿಯಲ್ಲಿ ಸಾಗುತ್ತಿತ್ತು. ನನ್ನ ಕಥೆಯನ್ನು ಸಮರ್ಥಿಸಲು ಕನಿಷ್ಠ ಆರು ಸಾಕ್ಷಿಗಳು ಬೇಕಿತ್ತು. ನನ್ನ ವಕೀಲರು ಅಸಹಕಾರ ಧೋರಣೆ ವ್ಯಕ್ತಪಡಿಸುತ್ತಿದ್ದರು. ನನಗೆ ಆಶ್ಚರ್ಯವಾಗಿದ್ದೆಂದರೆ ವಕೀಲರು ಇಂದ್ರಜಿತ್ ರೇ ಅವರಿಗೆ ತಡೆಯಾಜ್ಞೆ ಸಿಕ್ಕಿರುವ ವಿಷಯ ತಿಳಿಸಿರಲಿಲ್ಲ.

ಆ ದಿನವೇ ನಾವು ಆಗಿದ್ದು ಆಗಿಹೋಯ್ತು, ಕೋಡುಗಳನ್ನು ಹಿಡಿದುಕೊಂಡು ನಾನೊಬ್ಬಳೇ ಗೂಳಿಯನ್ನು ಪಳಗಿಸಬೇಕು ಎಂದು ನಿರ್ಧರಿಸಿದೆ. ನನ್ನ ವಕೀಲರು ಒಂದು ತಿಂಗಳಿಂದ ನನ್ನನ್ನ ಭೇಟಿಯಾಗುವುದನ್ನು ಯಾವುದಾದರೊಂದು ಕಾರಣ ನೀಡಿ ತಪ್ಪಿಸುತ್ತಿದ್ದರು. ಆದ್ದರಿಂದ ನಾನು ಕೇಳಿದರೆ ಭೇಟಿಯಾಗಲು ಅವಕಾಶ ಕೊಡುವುದಿಲ್ಲವೆಂದು ಗೊತ್ತಿದ್ದುದರಿಂದ ಆತನಿಗೆ ತಿಳಿಸದೇ ಆಶ್ಚರ್ಯಕರ ಭೇಟಿ ನೀಡಬೇಕೆಂದು ಯೋಚಿಸಿದೆ.

ರಕ್ಷಣಾಧಿಕಾರಿಗಳಿಂದ ಮತ್ತು ವಿಶೇಷವಾಗಿ ನಯಾಪಲ್ಲಿ

ಇನ್‌ಚಾರ್ಜ್ ಪೊಲೀಸ್ ಇನ್ಸ್‌ಪೆಕ್ಟರ್ ಪ್ರೇಮಾಂಜನ ಪರಿದಾನಿಂದ ಉದ್ದೇಶಪೂರ್ವಕ ಅಸಹಕಾರ ಮತ್ತು ಹಿಂಸೆ ಅನುಭವಿಸುವುದು ನನ್ನ ಜೀವನದ ಒಂದು ಭಾಗವೇ ಆಗಿ ಹೋಗಿತ್ತು. 1998ರ ಜೂನ್ ಅಂತ್ಯದಲ್ಲಿ ಪರಿದಾ ವಿರುದ್ಧ ಹೈಕೋರ್ಟ್‌ನಲ್ಲಿ ನಾನು ಸಲ್ಲಿಸಿದ ಅರ್ಜಿಯಿಂದಾಗಲೀ ಮತ್ತು ಭುವನೇಶ್ವರ ಎಸ್. ಪಿ.ಗೆ ಬರೆದ ಪತ್ರಗಳಿಂದಾಗಲೀ ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ.

ಜನವರಿ 9ರಂದು ಮಧ್ಯಾಹ್ನ 4 ಗಂಟೆಯಿಂದ ನನ್ನ ಮನೆಯ ಹೊರಗೆ ಟೆಂಟ್‌ನಲ್ಲಿರುವ ರಕ್ಷಣಾಧಿಕಾರಿಯನ್ನು ನನ್ನ PSO ಇತಿಶ್ರೀ ದಾಸ್ ಅವರನ್ನು ಸಂಪರ್ಕಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೆ. ಅವರಿಗೆ ಮನೆಯಲ್ಲಿ ದೂರವಾಣಿ ಸಂಪರ್ಕ ಇರಲಿಲ್ಲ. ನಾನು ಗಂಟೆಗಳಿಂದ ವಿನಂತಿಸಿಕೊಳ್ಳುತ್ತಿದ್ದರೂ ಅವರು ಸಂಪರ್ಕಿಸಲು ನಿರಾಕರಿಸಿದಾಗ ನಾನು ಹತಾಶಳಾಗಿ ಅಲ್ಲಿಂದಿಲ್ಲಿಗೆ ತಿರುಗಾಡುತ್ತಿದ್ದೆ. ಏನು ಮಾಡಲೂ ತೋಚದೇ ಒದ್ದಾಡುತ್ತಿದ್ದಾಗ OTVಯ ಸುದ್ದಿ ವಿಭಾಗದ ಮುಖ್ಯಸ್ಥ ಸುತಾನು ಗುರು ರೇ ಅವರ ತಡೆಯಾಜ್ಞೆಯ ವಿಷಯದ ಬಗ್ಗೆ ತಿಳಿಯಲು ಬಂದ. ಅವನು ನನ್ನ ಜೀವನ ಚರಿತ್ರೆ ಬರೆಯಲು ಕೂಡ ಇಚ್ಛಿಸುತ್ತಿದ್ದ. ಇದಕ್ಕೆ ಮುಂಚೆಯೂ ನಡೆದ ಹಲವಾರು ಘಟನೆಗಳಲ್ಲಿ ನನ್ನನ್ನು ಭೇಟಿಯಾಗಿದ್ದ. ನಾನು ಪರಿಸ್ಥಿತಿ ಗಂಭೀರವಾಗಿದೆ. ಆದ್ದರಿಂದ ವಕೀಲರ ಬಳಿ ಮಾತನಾಡಲು ಹೋಗಲೇಬೇಕೆಂದು ಅದಕ್ಕಾಗಿ ಅವನ ಸಹಾಯ ಬೇಕೆಂದು ಕೇಳಿಕೊಂಡಾಗ ಅವನು ಒಪ್ಪಿಕೊಂಡ. ರಾತ್ರಿ 8.30ಕ್ಕೆ ಅಲ್ಲಿಂದ ಹೊರಟೆವು.

ನಾನು ರಾಷ್ಟ್ರೀಯ ಹೆದ್ದಾರಿಯ ಟ್ರಾಫಿಕ್‌ನ್ನು ತಪ್ಪಿಸಿಕೊಳ್ಳುವುದಕ್ಕೆ ಕಟಕ್‌ಗೆ ಹೋಗಲು ಬಾರಂಗದ ರಸ್ತೆಯನ್ನು ಆಯ್ದುಕೊಂಡೆ. ನಾನು ಯಾವಾಗಲೂ ಅದೇ ರಸ್ತೆಯಲ್ಲೇ ಪ್ರಯಾಣಿಸುತ್ತಿದ್ದೆ ಮತ್ತು ಆ ಸಾಯಂಕಾಲ ಆಗಲೇ ಬಹಳ ತಡವಾಗಿತ್ತಲ್ಲದೇ ಹೆದ್ದಾರಿಯಲ್ಲಿ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಹಾಕಿಕೊಂಡರೆ ತಡವಾಗುವುದರಿಂದ ಬೇಗ ತಲುಪಬೇಕೆಂಬ ಉದ್ದೇಶದಿಂದ ಆ ದಾರಿಯಲ್ಲಿ ಹೊರಟೆ. ಬಾರಾಂಗದ ದಾರಿಯ ಒಂದೆಡೆ ಟ್ಯಾಕ್ಸಿ ಡ್ರೈವರ್ ಯಾಕೋ ನಿಧಾನವಾಗಿ ಓಡಿಸುತ್ತಿದ್ದಾನೆಂದು ನನಗನ್ನಿಸಿದಾಗ ಮುಂದೆ ನೋಡಿದೆ. ಅಲ್ಲಿ ಒಬ್ಬ ವ್ಯಕ್ತಿ ತನ್ನ ಕೈಗಳನ್ನು ಚಾಚಿಕೊಂಡು ದಾರಿಗಡ್ಡವಾಗಿ ನಿಂತಿದ್ದ. ಇನ್ನಿಬ್ಬರು ದಾರಿಬದಿಯಲ್ಲಿ ಸ್ಕೂಟರ್ ಪಾರ್ಕ್ ಮಾಡಿ ನಿಂತುಕೊಂಡಿದ್ದರು.

ದಾರಿಗಡ್ಡ ನಿಂತಿದ್ದ ಆ ವ್ಯಕ್ತಿ ರಿವಾಲ್ವರ್ ಹಿಡಿದು ಹತ್ತಿರ ಬಂದು ಗುರುವನ್ನು ಮುಂದಿನ ಸೀಟಿಗೆ ತಳ್ಳಿ ನನ್ನ ಪಕ್ಕದಲ್ಲಿ ಕುಳಿತು ಪೀಡಿಸಲಾರಂಭಿಸಿದ. ರಿವಾಲ್ವರ್‌ನ್ನು ಗುರು ತಲೆಗೆ ಹಿಡಿದ. ಕುಡುಗೋಲಿನಂತಹ ಆಯುಧವನ್ನು ಹಿಡಿದುಕೊಂಡ ಇನ್ನೊಬ್ಬ ವ್ಯಕ್ತಿ ಡ್ರೈವರನ್ನು ಎಳೆದು ಸ್ಕೂಟರಿನ ಹಿಂದಿನ ಸೀಟಿಗೆ ವರ್ಗಾಯಿಸಿದ. ಕಾಯುತ್ತಿದ್ದ ಇನ್ನೊಬ್ಬ ಮೂರನೆಯ ವ್ಯಕ್ತಿ ಡ್ರೈವರ್‌ನ ಸೀಟನ್ನು ಆಕ್ರಮಿಸಿಕೊಂಡ. ನಾವು ನಮ್ಮಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನು ಮತ್ತು ಹಣವನ್ನು ತೆಗೆದುಕೊಂಡು ನಮ್ಮನ್ನು ಹೋಗಲು ಬಿಡಿ ಎಂದು ಪರಿಪರಿಯಾಗಿ ಅವರನ್ನು ಕೇಳಿಕೊಂಡೆವು. ಆದರೆ ಆ ಮನುಷ್ಯ 'ನನ್ನನ್ನು ತಿನ್ನಬೇಕೆಂಬುದು ನನ್ನ ಬಯಕೆ' ಎಂದ. ಸ್ವಲ್ಪ ಮುಂದೆ ಕಾರನ್ನು ನಡೆಸಿಕೊಂಡು ಹೋಗಿ, ಅಲ್ಲಿಂದ ಕಚ್ಚಾದಾರಿಯಲ್ಲಿ ತಿರುಗಿಸಿಕೊಂಡು ಬಹಳ ದೂರ ನಿರ್ಜನ ಪ್ರದೇಶದಲ್ಲಿ ಕಾರು ಒಯ್ದ. ಅಲ್ಲಿ ಅವನು ನನ್ನನ್ನು ಕಾರಿನಿಂದ ಹೊರಗೆಳೆದ ಮತ್ತು ಕೈಗೆ ಕುಡುಗೋಲು ತೆಗೆದುಕೊಂಡ. ಗುರುವನ್ನು ಹಿಂದಿನ ಸೀಟಿನಲ್ಲಿ ಕುಳ್ಳಿರಿಸಿ ಸ್ಕೂಟರಿನಲ್ಲಿದ್ದ ವ್ಯಕ್ತಿ ಮಿಯಾನ್ ಎಂಬುವವನು ಗುರುವಿನ ತಲೆಗೆ ರಿವಾಲ್ವರ್ ಹಿಡಿದಿದ್ದ. ಅವನು ನನ್ನನ್ನು ಅಲ್ಲಿಂದ ಇನ್ನೂ ಸ್ವಲ್ಪ ದೂರ ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ನನ್ನನ್ನು ತಿನ್ನುತ್ತೇನೆಂದು ಹೇಳಿದ. ನಾನು 'ನನ್ನನ್ನು ಕೊಂದುಬಿಡು' ಎಂದು ಕೂಗಿದಾಗ ಅವನು ನಾನು ಸ್ವಲ್ಪ ಪ್ರತಿಭಟನೆ ತೋರಿದರೂ ಗುರುವನ್ನು ತಲೆಗೆ ಗುಂಡು ಹೊಡೆದು ಸಾಯಿಸುತ್ತೇನೆಂದು ಹೇಳಿದ.

ನನ್ನನ್ನು ಸಂಪೂರ್ಣ ನಗ್ನಗೊಳಿಸಿ ಆ ಭಯಾನಕ ಚಳಿಯ ರಾತ್ರಿಯಲ್ಲಿ ಪುನಃ ಪುನಃ ಅತ್ಯಾಚಾರವೆಸಗಿದ. ಅವನೇ ಹೇಳಿದಂತೆ ಆ ವ್ಯಕ್ತಿಯ ಹೆಸರು ವಿ. ಕೆ. ಮತ್ತು ಅವನ ಗೆಳೆಯ ಮಿಯಾನ್ ಒಬ್ಬರ ನಂತರ ಒಬ್ಬರು ನನ್ನ ಮೇಲೆ ಕ್ರೂರವಾಗಿ ಅತ್ಯಾಚಾರವೆಸಗಿದರು. ನನಗೆ ಅವರು ಹೇಳಿದ್ದೇನೆಂದರೆ ನಾನು ದಿಟ್ಟತನದಿಂದ ಹೋರಾಡುತ್ತಿರುವುದಕ್ಕೆ, ಇಂದ್ರಜಿತ್ ರೇ ಬಗ್ಗೆ ನನ್ನ ನಿಲುವನ್ನು ಬದಲಿಸಿಕೊಳ್ಳದೇ ಸಂಧಾನಕ್ಕೆ ಒಪ್ಪದೇ ಇರುವುದಕ್ಕೆ ನಾನು ತೆರುತ್ತಿರುವ ಬೆಲೆ ಇದೆಂದು ತಿಳಿಸಿದರಲ್ಲದೇ ಈಗಲೂ ನಾನು ಒಪ್ಪಿಕೊಂಡರೆ ಮುಖ್ಯಮಂತ್ರಿಯವರು ನನ್ನನ್ನು ರಾಣಿಯ ಹಾಗೆ ನೋಡಿಕೊಳ್ಳುತ್ತಾರೆಂದು ಮತ್ತು ಎಲ್ಲ ರೀತಿಯ ಐಷಾರಾಮದ ಬದುಕು ನನ್ನದಾಗುತ್ತದೆಂದು, ನಾನು ಒಪ್ಪದೇ ಇದ್ದರೆ ಇಂತಹುದೇ ಬೆಲೆ ಈಗ ಮಾತ್ರವಲ್ಲ, ಜೀವನಪೂರ್ತಿ ಅನುಭವಿಸಬೇಕಾಗುತ್ತದೆಂದು ಹೇಳಿದರು.

ಎಲ್ಲವೂ ಮುಗಿದ ನಂತರ ಕೊನೆಗೆ ನನ್ನನ್ನು ಕಾರಿನ ಬಳಿ ಕರೆತಂದರು ಮತ್ತು ಅವನ ವಿನಂತಿಯ ಮೇಲೇ ಗುರುವನ್ನು

ನನ್ನ ಪಕ್ಕದಲ್ಲಿ ಕುಳಿತುಕೊಳ್ಳಲು ಅವಕಾಶ ಕೊಟ್ಟರು. ಮಿಯಾನ್ ಸ್ಕೂಟರಿನಲ್ಲಿ ಹೋದ. ವಿ. ಕೆ. ಮುಂದಿನ ಸೀಟಿನಲ್ಲಿ ಕುಳಿತ. ಸಾಹು ಸ್ಟೇರಿಂಗ್ ಹಿಡಿದ ಮತ್ತು ಡ್ರೈವರ್‌ನನ್ನು ತಮ್ಮಿಬ್ಬರ ಮಧ್ಯೆ ಕುಳ್ಳಿರಿಸಿಕೊಂಡರು.

ತ್ರಿಸೂಲಿಯಾ ಚಾಕ್‌ನ ಮುಖ್ಯರಸ್ತೆಯಲ್ಲಿ ಒಂದೆಡೆ ಮೊಬೈಲ್ ಸ್ಕ್ವಾಡ್ ಗಾಡಿಯನ್ನು ನಿಲ್ಲಿಸಬೇಕೆಂದು ಸಂಜ್ಞೆ ಮಾಡಿದರೂ ಅವನು ಹಾಗೇ ಓಡಿಸಿದ. ಆದರೆ ಅವರು ಕೂಡ ಗಾಡಿ ನಿಲ್ಲಿಸಲು ಮುಂದೆ ಯಾವುದೇ ಪ್ರಯತ್ನ ಮಾಡಲಿಲ್ಲ. ಒಂದು ಕಿಲೋಮೀಟರ್ ದೂರ ಕ್ರಮಿಸಿದ ನಂತರ ಸಾಹು ಕಾರನ್ನು ಚಿಕ್ಕಹಳ್ಳಿಯೆಡೆಗೆ ತಿರುಗಿಸಿದ. ವಿ. ಕೆ. ಆಗ ಕಾರಿನಿಂದ ಹಾರಿಕೊಂಡ.

ಸಾಹು ನಂತರ ನಮ್ಮನ್ನು ಚಂದಕ ಕಾಡಿನ ಮೂಲಕ ಭುವನೇಶ್ವರಕ್ಕೆ ವಾಪಸ್ಸು ಕರೆದೊಯ್ಯುತ್ತೇನೆಂದು ಕಾಡಿನಲ್ಲಿ ಇನ್ನೊಂದು ನಿರ್ಜನ ಪ್ರದೇಶದೆಡೆಗೆ ಕಾರನ್ನು ತಿರುಗಿಸಿಕೊಂಡು ನಿಲ್ಲಿಸಿದ. ರಿವಾಲ್ವರನ್ನು ಕೈಯಲ್ಲಿ ಹಿಡಿದುಕೊಂಡೇ ನನ್ನನ್ನು ಹೊರಗೆಳೆಯಲು ಪ್ರಯತ್ನಿಸಿದ. ನಾನು ಬಲವಾಗಿ ಪ್ರತಿಭಟಿಸಿ ಗುರುವಿನ ಕಡೆಗೆ ಸರಿದುಕೊಂಡಾಗ ನಮ್ಮನ್ನು ಕೊಲ್ಲುವುದಾಗಿ ಬೆದರಿಸಿದ. ಆಗ ಗುರು 'ಕೊಂದು ಬಿಡು' ಎಂದಾಗ ಅವನನ್ನು ಚೆನ್ನಾಗಿ ಥಳಿಸಿದ. ನನಗೂ ಒಂದೆರಡು ಹೊಡೆತ ಕೊಟ್ಟು ರಿವಾಲ್ವರನ್ನು ಗುರುವಿನೆಡೆಗೆ ಹಿಡಿದು ಕಾರಿನ ಹಿಂದಿನ ಸೀಟಿನಲ್ಲಿ ಗುರುವಿನ ಎದುರಿಗೇ ಮತ್ತೆ ಅತ್ಯಾಚಾರವೆಸಗಿದ. ನಾನು ಟ್ಯಾಕ್ಸಿ ಡ್ರೈವರನನ್ನು ನಮಗೆ ಸಹಾಯ ಮಾಡಬೇಕೆಂದು ಅಂಗಲಾಚಿದಾಗ ಅವನು ತಲೆ ಅಲ್ಲಾಡಿಸಿ ಸಹಾಯ ಮಾಡಲು ಒಪ್ಪಲಿಲ್ಲ. ನಮ್ಮನ್ನು ಸಾಯಿಸುವವರೆಂದು ಗುರು ತಿಳಿಸಿದಾಗ ಭುವನೇಶ್ವರಕ್ಕೆ ವಾಪಸ್ಸು ಬಂದೆವು. ಎರಡು ಗಾಡಿಗಳು ನಮ್ಮನ್ನು ಭುವನೇಶ್ವರದವರೆಗೂ ಹಿಂಬಾಲಿಸಿದವು. ನಾವು ನಂತರ ಮತ್ತೆ ರಾಷ್ಟ್ರೀಯ ಹೆದ್ದಾರಿಯನ್ನು ಬಳಸಿಕೊಂಡು ಕಟಕ್‌ನಲ್ಲಿನ ನನ್ನ ವಕೀಲರ ಕಛೇರಿ ತಲುಪಿದೆವು. ನನ್ನ ವಕೀಲರು ಹೆಂಡತಿಗೆ ಹುಷಾರಿಲ್ಲದ ಕಾರಣ ಭುವನೇಶ್ವರಕ್ಕೆ ರಾತ್ರಿಯೇ ಹೋಗಿದ್ದಾರೆಂದು ತಿಳಿದಾಗ ನಮಗೆ ಇನ್ನಷ್ಟು ಆಘಾತವಾಯಿತು. ನಾನು ವಕೀಲರ ತಾಯಿಯ ಬಳಿ ನಾನು ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದೇನೆಂದು ವಕೀಲರನ್ನು ಸಂಪರ್ಕಿಸಲು ಅಲ್ಲಿಯ ದೂರವಾಣಿ ಉಪಯೋಗಿಸಲು ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಂಡಾಗ ಆಕೆ ನನ್ನ ಮುಖದ ಮೇಲೆ ಹೊಡೆದಂತೆ ಬಾಗಿಲು ಹಾಕಿಕೊಂಡಳು. ವಕೀಲರ ಮನೆಯ ಎದುರಿನ ಅಂಗಡಿಯವನು ನಮ್ಮ ಪರಿಸ್ಥಿತಿ ನೋಡಿ ಅಂಗಡಿಯಲ್ಲಿ ಕುಳಿತುಕೊಳ್ಳಬಹುದೆಂದು ತಿಳಿಸಿದ. ಕಾರಿನಲ್ಲಿದ್ದ ಸೆಲ್ ಫೋನನ್ನು ಅವರು ಬಿಟ್ಟು ಹೋಗಿದ್ದಾರೆಂದು ತಿಳಿಸಿ ಡ್ರೈವರ್ ಅದನ್ನು ತಂದುಕೊಟ್ಟ.

ನಾನು ದೂರವಾಣಿಯ ಮೂಲಕ ಆಘಾತ, ಅಸಹಾಯಕತೆಯಿಂದ ವಕೀಲರನ್ನು ಸಂಪರ್ಕಿಸಿದಾಗ ಅವರು "ಎಲ್ಲವೂ ಮುಗಿದು ಹೋಗಿರುವಾಗ ಈಗ FIR ಸಲ್ಲಿಸುವುದರಿಂದ ಏನು ಪ್ರಯೋಜನ?" ಎಂದು ತಣ್ಣಗಿನ ಧ್ವನಿಯಲ್ಲಿ ಹೇಳಿದಾಗ ನನಗೆ ಇನ್ನಷ್ಟು ಆಘಾತವಾಯಿತು. ನಾನು FIR ಸಲ್ಲಿಸಲೇಬೇಕು ಎಂದು ಹಠ ಹಿಡಿದಾಗ ಅವರು ಅಲ್ಲಿಗೆ ಬರುವುದಕ್ಕೆ ನಿರಾಕರಿಸಿದರು. ಅದಕ್ಕೆ ಕೊಟ್ಟ ಕಾರಣವೆಂದರೆ ರಾತ್ರಿ ಎರಡು ಗಂಟೆವರೆಗೂ ಗೆಳೆಯರೊಂದಿಗೆ ಪಾರ್ಟಿಯಲ್ಲಿದ್ದುದರಿಂದ ತಾವು ಬರುವ ಪರಿಸ್ಥಿತಿಯಲ್ಲಿಲ್ಲವೆಂದು ತಿಳಿಸಿದರು. ನಂತರ ನಾನು ನನ್ನ ಸ್ನೇಹಿತರನ್ನು ಮತ್ತು ಮಹಿಳಾ ಹೋರಾಟಗಾರ್ತಿಯರನ್ನು ಕರೆದುಕೊಂಡು ಮಹಿಳಾ ಪೊಲೀಸ್ ಠಾಣೆಗೆ ಹೋಗಿ FIR ಸಲ್ಲಿಸಿದೆ.

ನ್ಯಾಯಕ್ಕಾಗಿ ನನ್ನ ಹೋರಾಟ, ಮನುಷ್ಯನ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ಎಂದಿಗೂ ಬತ್ತಿ ಹೋಗದ ಉತ್ಸಾಹದಿಂದ ಮುಂದುವರೆಯುತ್ತದೆ. ನಾನು ಈ ಪ್ರಯತ್ನವನ್ನು ಎಂದಿಗೂ ಬಿಡುವುದಿಲ್ಲ. ಅಪರಾಧಗಳು ಪ್ರತಿ ದಿನವೂ ನಡೆಯುತ್ತಲೇ ಇವೆ, ಹೆಚ್ಚಾಗುತ್ತಲೇ ಇವೆ. ಇದು ನನ್ನ ವೈಯಕ್ತಿಕ ಹೋರಾಟ ಮಾತ್ರವಲ್ಲ, ಈ ಹೋರಾಟದಲ್ಲಿ ರಾಜ್ಯದ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ಏನೇ ಬರಲಿ ನಾನು ಖಂಡಿತ ಮುಂದುವರೆಯುವೆ. ನನಗೆ ಕಳೆದುಕೊಳ್ಳಲು ಉಳಿದಿರುವುದಾದರೂ ಏನು? ಎಲ್ಲವನ್ನು ಕಳೆದುಕೊಂಡಿದ್ದೇನೆ. ಈಗ ನಾನು ಗೆದ್ದೇ ಗೆಲ್ಲುತ್ತೇನೆಂಬ ಆತ್ಮ ವಿಶ್ವಾಸ ನನಗಿದೆ.

ಕೃಪೆ : ಔಟ್‌ಲುಕ್

ಅನುವಾದ : ಡಾ. ವಸುಂಧರಾ ಭೂಪತಿ, ಬೆಂಗಳೂರು

ಗಣರಾಜ್ಯೋತ್ಸವ ದಿನಾಚರಣೆಯಂದು ಸಾಮೂಹಿಕ ಅತ್ಯಾಚಾರ ನಡೆಸಿದವರಲ್ಲಿ ಒಬ್ಬನಾದ ಧೀರೇಂದ್ರ ಮೊಹಂತಿ ಅಲಿಯಾಸ್ ತುನಾ ಮೊಹಾಂತಿ ಬಂಧನಕ್ಕೊಳಗಾದ. ಅಪರಾಧ ನಡೆಸಿದ ಕೆಲವೇ ಗಂಟೆಗಳಲ್ಲಿ ಅಪರಾಧಿಗಳಲ್ಲಿ ಒಬ್ಬನಾದ ವಾದಿಯಾ ಸಾಹೂವೂ ಬಂಧನಕ್ಕೊಳಪಟ್ಟ. ಮೂರನೆಯ ವ್ಯಕ್ತಿ ಬಿಬಿನ್ ಬಿಸ್ವಾಲ್‌ಗಾಗಿ ಹುಡುಕಾಟ ನಡೆದಿದೆ.

ನಿರಂತರ ಹೋರಾಟದಿಂದ ಮಾತ್ರ ಜಾತ್ಯಾತೀತತೆ ಸಾಧ್ಯ

ಬಾಂಬೆಯ ಕಮ್ಯೂನಲಿಸಂ ಕಾಂಬ್ಯಾಟ್ ಪತ್ರಿಕೆಯ ಸಂಪಾದಕಿ ತೀಸ್ತಾ ಸೇತಲ್‌ವಾದ್ ಅವರು ಬೆಂಗಳೂರಿಗೆ ಬಂದ ಸಂದರ್ಭದಲ್ಲಿ 'ಮಾನಸ' ಬಳಗ ಅವರನ್ನು ಮಾತನಾಡಿಸಿತು. ಸದ್ಯದ ಮತೀಯ ವಾತಾವರಣದ ಸಂದರ್ಭದಲ್ಲಿ ತೀಸ್ತಾ ಅವರ ಮಾತುಗಳು ಹೆಚ್ಚು ಪ್ರಸ್ತುತವೆನಿಸಿ, ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ.

ಬಾಂಬೆಯಲ್ಲಿ ನಡೆದ ಮತೀಯ ಗಲಭೆಗಳು ದೈನಂದಿನ ಜೀವನದ ಮೇಲೆ ಯಾವ ರೀತಿಯ ಪರಿಣಾಮವನ್ನು ಉಂಟುಮಾಡಿದ್ದವು?

1995ರಿಂದ ರಾಜಕೀಯ ಪ್ರೇರಿತ ಮತೀಯ ಗಲಭೆಗಳು ಬಾಂಬೆಯಲ್ಲಿ ಪ್ರಾರಂಭವಾದವು. ಹಿಂಸೆ, ಗೂಂಡಾಗಿರಿಯನ್ನು ನಡೆಸುವುದರ ಮೂಲಕ ಭಯಾನಕ ವಾತಾವರಣವನ್ನು ಉಂಟು ಮಾಡಲಾಗಿದೆ. ಶಿವಸೇನೆ ತನ್ನ ಪತ್ರಿಕೆಯ ಮೂಲಕ ದ್ವೇಷದ ರಾಜಕೀಯ ಮನೋಭಾವನೆಯನ್ನು ಜನರಲ್ಲಿ ಬಿತ್ತುತ್ತಿದೆ. ಫೈಯರ್ ಚಿತ್ರದ ಮೇಲೆ ನಡೆಸಿದ ದಾಂದಲೆ ಇದಕ್ಕೊಂದು ನಿದರ್ಶನ. ಜನರ ಮನಸ್ಸಿನ ಮೇಲೆ ಭೀತಿಯನ್ನು ಮೂಡಿಸಿದ್ದರಿಂದ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರವು ವಿತರಕರು ಪ್ರದರ್ಶನ ಏರ್ಪಡಿಸಲು ಹೆದರಿದರು. ಸಲ್ಮಾನ್ ರಷ್ದಿಯ ಪುಸ್ತಕವನ್ನು ತಮ್ಮ ಪುಸ್ತಕ ಅಂಗಡಿಗಳಲ್ಲಿ ಇಟ್ಟು ಮಾರಾಟ ಮಾಡಲು ವ್ಯಾಪಾರಿಗಳು ಹೆದರುತ್ತಾರೆ. ಜಾತ್ಯಾತೀತತೆಯ ಬಗ್ಗೆ ಇರುವ ಅವಕಾಶ ಕಡಿಮೆಯಾಗಿದೆ. ಜಯಪ್ರಕಾಶ್ ನಾರಾಯಣ್ ಪಾರ್ಕ್ ಇದಕ್ಕೆ ಉತ್ತಮ ನಿದರ್ಶನ. ಅಲ್ಲಿ ದಲಿತರು, ಕಾರ್ಮಿಕರು, ರಾಜಕೀಯ ಪಕ್ಷದವರು ಎಲ್ಲರೂ ಸಭೆಯನ್ನು ನಡೆಸುತ್ತಿದ್ದರು. ಆದರೆ ಈಗ ಠ್ಯಾಕರೆಯನ್ನು ಬಿಟ್ಟರೆ, ಸೋನಿಯಾ ಗಾಂಧಿ ಮಾತ್ರ ಅಲ್ಲಿ ಭಾಷಣ ಮಾಡಿದ್ದಾರೆ.

ಈ ಪ್ರಕ್ರಿಯೆಗೆ ಕಾರಣವೇನು?

ಇದು ಪ್ರಾರಂಭವಾದದ್ದು, 'ನಮ್ಮ ಭಾಷೆ' ಎಂಬ ಸಮಸ್ಯೆಯಿಂದ. ದಕ್ಷಿಣ ಭಾರತದವರನ್ನು ದ್ವೇಷಿಸುವ ಮನೋಭಾವನೆ ಮೊದಲು ಪ್ರಾರಂಭವಾಯಿತು. ಅವರನ್ನು ಕಪ್ಪು ಲುಂಗಿವಾಲಾಗಳೆಂದೇ ಕರೆಯಲಾಗುತ್ತಿತ್ತು. ಅವರಿಗಿದ್ದ ವಿದ್ಯಾಭ್ಯಾಸದಿಂದ ಸರಕಾರಿ ನೌಕರಿ ಪಡೆದವರ ವಿರುದ್ಧ ಮರಾಠಿ ಭಾಷೆ, ಮರಾಠಿ ಜನ ಎಂಬ ಧೋರಣೆ ಮೇಲೆ ಅವರನ್ನು 'ಧೂಷಿಸ' ತೊಡಗಿದರು. 84ರಲ್ಲಿ ಈ ದ್ವೇಷ ಮುಸ್ಲಿಂರ ಮೇಲೆ ತಿರುಗಿತು. ಗುಜರಾತಿಗಳ ವ್ಯವಹಾರ, ಹಣಕಾಸುಗಳಿಂದಾಗಿ ಅವರ ಮೇಲೂ ಅಸಹನೆ ಬೆಳೆದಿದೆ. ಈ ದೃಷ್ಟಿಯಿಂದ ಶಿವಸೇನೆ ಬೆಳೆಯುತ್ತಾ ಬಂದಿದೆ. ಹಿಂದೂ ಮಹಾಸಭೆ ನಾಗಪುರದಲ್ಲಿ ತನ್ನ ಹೆಚ್ಚು ಸದಸ್ಯತ್ವವನ್ನು ಹೊಂದಿತ್ತು. ಆದರೆ ಮಹಾರಾಷ್ಟ್ರದಲ್ಲಿ ಇದು ರಾಜಕೀಯವಾಗಿ ಚಾನಲೈಸ್ ಆಗಿರಲಿಲ್ಲ. ಇದನ್ನು ಶಿವಸೇನೆ ಚೆನ್ನಾಗಿ ಬಳಸಿಕೊಂಡಿತು. ಮುಸ್ಲಿಂ ವಿರೋಧಿ, ಮರಾಠಿ ಹಿಂದುತ್ವದ ಮನಸ್ಥಿತಿಯು ಬೇರೂರಿದೆ. ಮುಂದಿನ ಚುನಾವಣೆಯಲ್ಲಿ ಬಿ.ಜೆ.ಪಿ. ಸೋತರೂ ಈ ಮನಸ್ಥಿತಿ ಸುಲಭವಾಗಿ ಬದಲಾಗುವುದಿಲ್ಲ.

ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆಯಾಗಬೇಕು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಮತಾಂತರದ ಬಗ್ಗೆ ಬಿ.ಜೆ.ಪಿ.ಯವರು ಜನರ ಮುಂದೆ ಇಡುತ್ತಿರುವ ವಾದ ಬೋಗಸ್ ಆದುದು. ತಮ್ಮ ಜನರಿಂದಲೇ ಹಿಂಸೆ ಮಾಡಿಸಿ, ಅವರಿಗೆ ನ್ಯಾಯ ದೊರಕಿಸಿಕೊಡುವ ಬದಲು ಮತಾಂತರ ಸಮಸ್ಯೆಯನ್ನು ದೊಡ್ಡದು ಮಾಡಲಾಗುತ್ತಿದೆ. ಜಾತ್ಯಾತೀತತೆಯ ಪ್ರಜಾಪ್ರಭುತ್ವದಲ್ಲಿ ಮೂಲಭೂತವಾಗಿ ಜನರಿಗೆ ಆಯ್ಕೆ ಮಾಡಿಕೊಳ್ಳುವ ಹಕ್ಕು ಇದೆ. ಇದನ್ನು ವಿರೋಧಿಸುವ ಮನಸ್ಸು ಸನಾತನಿಯಾದ ಮನಸ್ಸು. ಸನಾತನಿಯಾದ ಮನಸ್ಸು "ಹುಟ್ಟು" ಮಾತ್ರ ಎಲ್ಲವನ್ನೂ ನಿರ್ಧರಿಸುತ್ತಿದೆ ಎಂದು ಭಾವಿಸುತ್ತದೆ.

ಸಾಮಾಜಿಕ ಸಮಾನತೆಗಾಗಿ ಅಂಬೇಡ್ಕರ್ ರಾಜಕೀಯವಾಗಿ ಆಯ್ಕೆ ಮಾಡಿಕೊಂಡಿದ್ದು ಮತಾಂತರವನ್ನು. ಇದು ನಮ್ಮ ಇತಿಹಾಸದ ಪುಸ್ತಕದಲ್ಲಿ ದಾಖಲಾಗುವುದೇ ಇಲ್ಲ. 1936ರಲ್ಲಿ 10 ಮಿಲಿಯನ್ ಜನರು ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಇದು ಒಂದು ಸಾಂಕೇತಿಕ ಘಟನೆ. ಇದನ್ನು ಇತಿಹಾಸದ ಪುಟಗಳಿಂದ ತೆಗೆದುಹಾಕಲು ಸಾಧ್ಯವಿಲ್ಲ. 1927 ಡಿಸೆಂಬರ್ 27ರ ಮಹತ್ವವನ್ನು ಕುರಿತು ಕೇಳಿದರೆ ಯಾರಿಗೂ ಗೊತ್ತಿಲ್ಲ.

ಅಂದು ಬಾಬಾಸಾಹೇಬ್ ಅಂಬೇಡ್ಕರ್ ತಮ್ಮ ಹಳ್ಳಿ ಮಹಾಡ್‌ನಲ್ಲೇ ಮನುಸ್ಮೃತಿಯನ್ನು ಸುಟ್ಟು ಹಾಕಿದರು.

ಇದನ್ನು ಹೇಗೆ ಮರೆಯಲು ಸಾಧ್ಯ. ಮತಾಂತರವನ್ನು ದಲಿತರ ದೃಷ್ಟಿಕೋನದ ಹೊರತಾಗಿ ನೋಡಲು ಸಾಧ್ಯವಿಲ್ಲ. ನಮ್ಮ ದೇಶದ ಜನಸಂಖ್ಯೆಯಲ್ಲಿ ಶೇ. 25ರಷ್ಟು ದಲಿತರು ಇದ್ದಾರೆ. ಸನಾತನಿಗಳು ಕೇವಲ ಶೇ. 12ರಷ್ಟು ಇದ್ದಾರೆ. ಈ ವಿಚಾರ ಧಾರೆಯಲ್ಲಿ ನಮ್ಮ ಹುಟ್ಟು, ಜಾತಿ, ಎಲ್ಲವನ್ನೂ ನಿರ್ಧರಿಸುವ ಅಂಶವಾಗುತ್ತದೆ.

ಆಮಿಷಗಳ ಮೂಲಕ ಮತಾಂತರ ಮಾಡಲಾಗುತ್ತದೆಯೆಂಬ ಆರೋಪ ಕುರಿತು ನಿಮ್ಮ ಅಭಿಪ್ರಾಯವೇನು?

ಹಿಂದುಳಿದ, ದಲಿತರ, ಆದಿವಾಸಿಗಳ, ಕ್ಷಯರೋಗಿಗಳ ಜೊತೆ ಕೆಲಸ ಮಾಡಲು ಯಾರೂ ತಯಾರಿರುವುದಿಲ್ಲ. ನಾವೂ ಮಾಡುವುದಿಲ್ಲ. ಮಧ್ಯಮ ವರ್ಗದ ಹಿಂದೂಗಳೂ ಮಾಡುವುದಿಲ್ಲ. ಶ್ರೀಮಂತರಿಗೆ ಈ ಸಮಸ್ಯೆಗಳ ಗೊಂದಲ ಬೇಕಿಲ್ಲ. ಈ ಸಮಸ್ಯೆಯ ಇನ್ನೊಂದು ಮುಖವನ್ನು ಗಮನಿಸಬೇಕಾಗುತ್ತದೆ. ಸ್ಥಳೀಯವಾಗಿ ಈ ಜನರ ಸ್ಥಾನಮಾನದಲ್ಲಿ ಬದಲಾವಣೆಯುಂಟಾಗುತ್ತದೆ. ಅವರಿಗೆ ವಿದ್ಯಾಭ್ಯಾಸ ದೊರೆಯುತ್ತದೆ. ಸ್ತ್ರೀಯರಲ್ಲೂ ಜಾಗೃತಿ ಮೂಡುತ್ತಿದೆ. ತಮ್ಮ ಮೇಲೆ ನಡೆಯುವ ದಬ್ಬಾಳಿಕೆಯನ್ನು ಈ ಜನರು ಒಪ್ಪಿಕೊಳ್ಳುವುದಿಲ್ಲ. ಶ್ರೀಮಂತರು ಹಾಗೂ ಮಧ್ಯಮ ವರ್ಗದವರು "ದಲಿತರು ಎಲ್ಲಿ ಇರಬೇಕೋ ಅಲ್ಲೇ ಇರಬೇಕೆಂದು ಬಯಸುತ್ತಾರೆ. ಅವರ ಸ್ಥಾನಮಾನದಲ್ಲಿ ಬದಲಾವಣೆ ಯಾಗುವುದನ್ನು ಇವರು ಬಯಸುವುದಿಲ್ಲ. ಈ ಜನರ ಬಗ್ಗೆ ಒಂದು ರೀತಿಯ ಆಳವಾದ ತಿರಸ್ಕೃತ ಭಾವನೆ ಜನರಲ್ಲಿ ಇದೆ.

ಜಾಗತೀಕರಣಕ್ಕೂ, ಮತೀಯ ಗಲಭೆಗಳಿಗೂ ಸಂಬಂಧ ಇದೆಯೆ?

ಇದರ ಬಗ್ಗೆ ಅಧ್ಯಯನ ಮಾಡದೆ ಪ್ರತಿಕ್ರಿಯೆಯನ್ನು ನೀಡಲು ನನಗೆ ಸಾಧ್ಯವಿಲ್ಲ. ನಮ್ಮ ದೇಶದವರು ಬೇರೆಯ ದೇಶಕ್ಕೆ ಹೋದಾಗ ಈ ರೀತಿಯ ಪ್ರತಿಕ್ರಿಯೆಗಳು ಕಂಡುಬರುವುದು ಸಹಜ. ಉಪಭೋಗ ಸಂಸ್ಕೃತಿ, ನಮ್ಮ ಬೇರುಗಳನ್ನು ನಾವು ಕಳೆದುಕೊಳ್ಳುವುದು, ನಮ್ಮ ಸಂಸ್ಕೃತಿಗೆ ವಾಪಸ್ಸು ಬರುವುದು ಇಂತಹ ವಿಚಾರಗಳು, ಮಧ್ಯಮ ವರ್ಗ, ಶ್ರೀಮಂತ ವರ್ಗದ ಜನರಲ್ಲಿ ಕಂಡುಬರುತ್ತಿದೆ. ಶ್ರೀಲಂಕಾದ ಇತಿಹಾಸಕಾರರೊಬ್ಬರ ಅಭಿಪ್ರಾಯದಂತೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಬಹುಮುಖೀ ಸಂಸ್ಕೃತಿಯ ಜನಜೀವನದ ಶೈಲಿಯೊಂದಿಗೆ ಕೆಲಸ ಮಾಡುವುದಕ್ಕಿಂತ ಏಕಮುಖೀ ಸಾಂಸ್ಕೃತಿಕ ಜೀವನದ ಶೈಲಿಯೊಡನೆ ಕೆಲಸ ಮಾಡುವುದು ಸುಲಭ.

ಮತೀಯ ಸಮಸ್ಯೆಗಳನ್ನು ಮಹಿಳಾ ಸಂಘಟನೆಗಳು ಹೇಗೆ ಎದುರಿಸಬೇಕು?

ಮಹಿಳಾ ಸಂಘಟನೆಗಳು ಮಹಿಳೆಯರ ದೈನಂದಿನ ಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತದೆ. ಬಾಂಬೆಯಂತಹ ಪಟ್ಟಣದಲ್ಲಿ ರೇಶನ್ ಕಾರ್ಡ್ ಸಮಸ್ಯೆ ಬಹುದೊಡ್ಡ ಸಮಸ್ಯೆ. ಸ್ಲಂಗಳಲ್ಲಿ ನೀರಿನ ಸಮಸ್ಯೆ, ಮಧ್ಯಮ ವರ್ಗದ ಮಹಿಳೆಯರು ಎದುರಿಸುವ ಸಮಸ್ಯೆಗಳು ಬೇರೆ ಸ್ವರೂಪದವು. 'ಶಾಲೆಗಳಿಗೆ' ಪ್ರವೇಶ ದೊರೆಯುವುದು, ಮಧ್ಯಮ ವರ್ಗದ ಮಹಿಳೆಯರು ಎದುರಿಸುವ ಬಹುದೊಡ್ಡ ಸಮಸ್ಯೆ. ಇಂತಹ ಸಮಸ್ಯೆಗಳ ಸುತ್ತ ಮಹಿಳೆಯರನ್ನು ಸುಲಭವಾಗಿ ಸಂಘಟಿಸಬಹುದು. ಜೊತೆಯಲ್ಲಿ ಮತೀಯ ಸಮಸ್ಯೆಗಳನ್ನು ಅವರೊಂದಿಗೆ ಚರ್ಚಿಸಬೇಕಾಗುತ್ತದೆ. ಇಂತಹ ಸಮಸ್ಯೆಗಳಿಗೆ ಸ್ಪಂದಿಸುವ ಸಂಘಟನೆಗಳಿಗಾಗಿ ಅವರು ಎದುರು ನೋಡುತ್ತಾರೆ.

ಜನರಿಗೆ ಬಿ.ಜೆ.ಪಿ.ಯ ಬಗ್ಗೆಯಿದ್ದ ಭ್ರಮೆ ಕಡಿಮೆಯಾಗಿದೆಯೆನ್ನಬಹುದು. ಬಿ.ಜೆ.ಪಿ.ಯ ಅತಿರೇಕದ ನಿಲುವುಗಳು ಬಿ.ಜೆ.ಪಿ.ಯ ಬಗ್ಗೆ ನೆಗೆಟೀವ್ ಇಮೇಜ್‌ನ್ನು ಬೆಳೆಸಿದೆ. ಗ್ರಾಮ್ ಸ್ಟೈನ್‌ರ ಜೀವಂತ ದಹನ ಇದಕ್ಕೆ ಸಾಕ್ಷಿಯಾಗಿದೆ. ಅಧಿಕಾರವಿಲ್ಲದಾಗ, ಅಧಿಕಾರಕ್ಕೆ ಬಂದಾಗ ಈ ಪಕ್ಷ ನಡೆದುಕೊಳ್ಳುತ್ತಿರುವ ರೀತಿಯ ಬಗ್ಗೆ ಜನರಿಗೆ ತಮ್ಮದೇ ಆದ ಅಭಿಪ್ರಾಯವಿದೆ. ಹಿಂದುತ್ವ, ಸಂಸ್ಕೃತಿಯ ಬಗ್ಗೆ ಬಿ.ಜೆ.ಪಿ.ಯ ಇಮೇಜ್‌ನ್ನು ಜನರು ತಿರಸ್ಕರಿಸುತ್ತಿದ್ದಾರೆ.

ಫೈಯರ್ ಸಿನಿಮಾದ ಬಗ್ಗೆ ನಡೆದ ವಿವಾದದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಬಾಂಬೆಯಲ್ಲಿ ಈ ಚಿತ್ರವನ್ನು ಪುರುಷರು ಹಾಗೂ ಮಹಿಳೆಯರು ಇಬ್ಬರೂ ನೋಡುತ್ತಿದ್ದರು. ಬಾಂಬೆಯಲ್ಲಿ ಈ ಚಿತ್ರ ಹೆಚ್ಚು ಜನಪ್ರಿಯತೆಯನ್ನು ಗಳಿಸಿತ್ತು. ಈ ಚಿತ್ರದ ಬಗ್ಗೆ ಒಂದು ನಿರ್ದಿಷ್ಟ ನಿಲುವನ್ನು ತೆಗೆದುಕೊಂಡವರು ಮಾತ್ರವಲ್ಲ, ಜನಸಾಮಾನ್ಯರು ಸಹ ಈ ಚಲನಚಿತ್ರವನ್ನು ವೀಕ್ಷಿಸುತ್ತಿದ್ದರು. ಅವರು ಲೆಸಿಬಿಯನಿಸಂ ಕಾರಣಕ್ಕೊ, ಅಥವಾ ಬೇರೆ ಯಾವ ಕಾರಣಕ್ಕೆ ನೋಡುತ್ತಿದ್ದರೊ ಗೊತ್ತಿಲ್ಲ. ಮೊದಲು ಈ ಚಿತ್ರವನ್ನು ಪ್ರದರ್ಶಿಸುತ್ತಿದ್ದ ಸಿನಿಮಾ ಮಂದಿರಗಳ ಮೇಲೆ ದಾಂದಲೆ ನಡೆದು

ಚಿತ್ರ ಪ್ರದರ್ಶನವನ್ನು ತಡೆ ಹಿಡಿದಾಗ, ಸಿನಿಮಾ ನೋಡುವ ಅವಕಾಶದಿಂದ ವಂಚಿತರಾದುದರ ಬಗ್ಗೆ ಸಾರ್ವಜನಿಕರಲ್ಲಿ ಅಸಮಾಧಾನ, ಅಸಹನೆ ಇತ್ತು. ಈ ಚಲನಚಿತ್ರವನ್ನು ನೋಡಬೇಕೆ, ಬೇಡವೆ ಎಂಬುದನ್ನು ನಾವು ನಿರ್ಧರಿಸುತ್ತೇವೆ. ಠಾಕರೆ ಏಕೆ ನಿರ್ಧರಿಸಬೇಕು? ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿತ್ತು.

ಫೈಯರ್ ಚಲನಚಿತ್ರ ಹಿಂದೂ ಮೂಲಭೂತವಾದಿಗಳ ವಿಕೃತ ಕೋಪಕ್ಕೆ ಬಲಿಯಾಯಿತು. ಫೈಯರ್ ಚೆನ್ನಾಗಿ ಮೂಡಿಬಂದ ಚಲನಚಿತ್ರ. ಹಿಂದೂ ಮನಸ್ಥಿತಿಗೆ ಒಂದು ರೀತಿಯ ಸಂಬಂಧ ಮಾತ್ರ ಸಾಧ್ಯವಾಗಿದೆ. ಪರ್ಯಾಯ ಲೈಂಗಿಕ ಸಂಬಂಧ ಒಂದು ರೀತಿಯ ಬೆದರಿಕೆ, ಹೆಣ್ಣು ತನ್ನನ್ನು ತಾನು ಅಂತಿಮದಲ್ಲಿ ಸಮರ್ಥಿಸಿಕೊಳ್ಳುವ ವಿಧಾನ. ಸ್ತ್ರೀಯ ಲೈಂಗಿಕ ತೃಪ್ತಿಗೆ ಪುರುಷನ ಅಗತ್ಯವಿತ್ತು. ಈ ಅಗತ್ಯವಿಲ್ಲವೆನ್ನುವುದು ಒಂದು ರೀತಿಯ ಬೆದರಿಕೆಯೆ. ಈ ಚಲನಚಿತ್ರದಿಂದ ಲೆಸಿಬಿಯನಿಸಂ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ನಡೆಸಲು ಸಾಧ್ಯವಾಯಿತು. ಎಲ್ಲಾ ಪತ್ರಿಕೆಗಳು ಇದ್ದಕ್ಕಿದ್ದಂತೆ ಈ ವಿಷಯವನ್ನು ಕುರಿತು ಲೇಖನಗಳನ್ನು ಪ್ರಕಟಿಸತೊಡಗಿದವು. ಲೆಸಿಬಿಯನಿಸಂ ನಮ್ಮ ದೇಶದಲ್ಲಿ ಆಚರಣೆಯಲ್ಲಿತ್ತು. ಹಾಗು ಅದರ ಸ್ವರೂಪ ಏನೆಂಬುದರ ಬಗ್ಗೆ ಚರ್ಚೆ ಪ್ರಾರಂಭವಾಯಿತು. ನಾನೇ ಆಗಿದ್ದರೂ, ಈ ವಿಷಯವನ್ನು ಚರ್ಚಿಸುವುದಕ್ಕಿಂತ ಮತೀಯ ಸಮಸ್ಯೆಯ ಬಗ್ಗೆ ಚರ್ಚಿಸುವುದಕ್ಕೆ ಆದ್ಯತೆ ನೀಡುತ್ತಿದ್ದೆ. ಇಂತಹ ಸಂದರ್ಭದಲ್ಲಿ ಈ ಚಿತ್ರದ ಮೂಲಕ ಲೆಸಿಬಿಯನಿಸಂ ಬಗ್ಗೆ ಮುಕ್ತ ಚರ್ಚೆ ಸಾಧ್ಯವಾಯಿತು.

ಕಮ್ಯೂನಲಿಸಂ ಕಾಂಬ್ಯಾಟ್ ಪತ್ರಿಕೆಯ ಪ್ರಕಟಣೆಯ ಬಗ್ಗೆ ನಿಮ್ಮ ಅನುಭವ?

ಪತ್ರಿಕೆಯ ಮೂಲಕ ಜಾತ್ಯಾತೀತತೆಯ ನಿಲುವಿನಿಂದ, ತಾತ್ವಿಕ ಪರಿಕಲ್ಪನೆಯನ್ನು ಜನರಲ್ಲಿ ಬಿತ್ತುವ ಉದ್ದೇಶ ಹೊಂದಿದ್ದು, ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ದೈನಂದಿನ ಜೀವನದಲ್ಲಿ ಪೂರ್ವಾಗ್ರಹ ಪೀಡಿತ ಹಾಗೂ ದ್ವೇಷದಿಂದ ಕೂಡಿದ ರಾಜಕೀಯ ನಿಲುವನ್ನೇ ನಾವು ನೋಡುತ್ತೇವೆ. ಜನರ ಜೀವನದಲ್ಲಿ ಇಲ್ಲದಿರುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಹುಟ್ಟು ಹಾಕುತ್ತಿರುವುದನ್ನು ನಾವು ಕಾಣುತ್ತೇವೆ. ಕೆಲವು ಆಯ್ದ ಮತೀಯ ಜನಾಂಗವನ್ನು ಇದಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಜಾತ್ಯಾತೀತತೆಯನ್ನು ಮಾನವ ಹಕ್ಕುಗಳಿಂದ, ಹಾಗೂ ಮಹಿಳೆಯ ಹಕ್ಕುಗಳಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಇದು ಬಹುಸಂಖ್ಯಾತ, ಅಲ್ಪಸಂಖ್ಯಾತರ ಪರವಾಗಿ ಎಂದು ನೋಡಬೇಕಾದ ಹೋರಾಟವಲ್ಲ. ವಿರುದ್ಧ ಮೂಲಭೂತವಾದಿ ಶಕ್ತಿಗಳು ಎರಡರಲ್ಲೂ ಇರುತ್ತವೆ. ಈ ಸಮಸ್ಯೆಯನ್ನು ನಿರಂತರವಾಗಿ ಎದುರಿಸಬೇಕಾಗುತ್ತದೆ. ಈ ದೃಷ್ಟಿಯಿಂದಲೇ ನಮ್ಮ ಪತ್ರಿಕೆಯಲ್ಲಿ 'ಲಿವಿಂಗ್ ವಿತ್ ಡಿವೈಡ್' ಕಾಲಂನ ಮೂಲಕ ಪಾಕಿಸ್ತಾನ, ಬಾಂಗ್ಲಾದೇಶ ಕುರಿತು ಲೇಖನಗಳನ್ನು ಪ್ರಕಟಿಸಿದ್ದೇವೆ. ಅಲ್ಲಿ ನಡೆದ ಪ್ರಗತಿಪರ ಚಳುವಳಿ, ಮಹಿಳಾ ಚಳುವಳಿಗಳನ್ನು ಕುರಿತು ಪ್ರಕಟಿಸಿದ್ದೇವೆ. ಐವತ್ತು ವರ್ಷದ ಹಿಂದೆ ಧಾರ್ಮಿಕ ದೇಶ ಸ್ಥಾಪನೆಯಾದಾಗ, ಅದರ ಪರಿಣಾಮ ಇನ್ನೂ ಉಳಿದಿದೆ. ಜಾತ್ಯಾತೀತತೆಯನ್ನು ಹುಟ್ಟುಹಾಕಬೇಕಾದರೆ, ದೂರದೃಷ್ಟಿಯಿಂದ ಈ ಕೆಲಸವನ್ನು ಮಾಡಬೇಕಾಗುತ್ತದೆ. ಎರಡೂ ದೇಶಗಳ ದೃಷ್ಟಿಯಿಂದ ಇದು ಅತ್ಯಗತ್ಯವಾಗುತ್ತದೆ. ಏಕೆಂದರೆ, ಇಲ್ಲಿ ಮತೀಯ ಗಲಭೆಗಳು ನಡೆದಾಗ ಪ್ರತಿಕ್ರಿಯಾತ್ಮಕವಾಗಿ ಅಲ್ಲಿ ಘಟನೆಗಳು ನಡೆಯುತ್ತವೆ. ಜಾತ್ಯಾತೀತತೆಯ ಬೀಜವನ್ನು ಹುಟ್ಟುಹಾಕಬೇಕಾದರೆ ನಿರಂತರವಾಗಿ ಈ ಸಮಸ್ಯೆಯ ವಿರುದ್ಧ ಹೋರಾಡಬೇಕಾಗುತ್ತದೆ.

ಟ್ರೇಡ್ ಯೂನಿಯನ್ ಪ್ರತಿಕ್ರಿಯೆ ಏನು?

1992ರ ಡಿಸೆಂಬರ್ ಹಿಂಸಾತ್ಮಕ ಗಲಭೆಯನ್ನು ಕುರಿತು, ಟ್ರೇಡ್ ಯೂನಿಯನ್‌ನ ಎಲ್ಲಾ ನಾಯಕರನ್ನು ಸಭೆ ಕರೆದಿದ್ದರು. ಮಸೀದಿ ಕೆಡವಿದ್ದನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆ ನಡೆಸಲು ನಾಯಕರು ಮುಂದೆ ಬರಲಿಲ್ಲ. ಅವರ ಹೋರಾಟ ಕೇವಲ ಆರ್ಥಿಕ ಬೇಡಿಕೆಗಳಿಗೆ ಸೀಮಿತಗೊಂಡಿದೆ. ಕಾರ್ಮಿಕರ ಸಾಂಸ್ಕೃತಿಕ ಬೆಳವಣಿಗೆಯ ಬಗ್ಗೆ ಅವರಿಗಿರುವ ಆಸಕ್ತಿ ಕಡಿಮೆ. ದತ್ತಾಸಾಮಾಂತ ಸಂಸತ್ತಿಗೆ ಆಯ್ಕೆಯಾಗಿರುವುದನ್ನು ಬಿಟ್ಟರೆ, ಒಂದು ರಾಜಕೀಯ ಪಕ್ಷವಾಗಿ ಮೂಡಿ ಬರಲು ಸಾಧ್ಯವಾಗಲಿಲ್ಲ. ಈ ಮಾತು ಮಹಿಳಾ ಚಳುವಳಿಗೆ ಅನ್ವಯವಾಗುತ್ತದೆ. ಸೇವಾ ಇದಕ್ಕೆ ಉತ್ತಮ ನಿದರ್ಶನ. 1992-93ರಲ್ಲಿ ಸೇವಾ ಜನಪ್ರಿಯ ಸಂಘಟನೆಯಾಗಿತ್ತು. ಆದರೆ ಬಾಬ್ರಿಮಸೀದಿಯನ್ನು ಕೆಡವಿದ ನಂತರ ಸೇವಾದ ಸದಸ್ಯರು ಈ ಸಮಸ್ಯೆಗೆ ಸಂಬಂಧಪಟ್ಟಂತೆ ವಿಭಜಿತರಾದರು. ಅಂಬಿಕಾ ಟೆಕ್ಸ್‌ಟೈಲ್ ಫ್ಯಾಕ್ಟರಿಯಲ್ಲು ಇದೇ ಸಮಸ್ಯೆ ಉಂಟಾಯಿತು. ದಲಿತರ, ಹಿಂದುಳಿದವರು ಬೇರೆ ಬೇರೆ ನಿಲುವನ್ನು ತೆಗೆದುಕೊಂಡು ಹೋಳಾದರು. ಇದಕ್ಕೆ ಮುಖ್ಯ ಕಾರಣವೆಂದರೆ ಈ ಸಂಘಟನೆಗಳು ಕೋಮುವಾದದಂತಹ ಸಮಸ್ಯೆಯನ್ನು ಪ್ರಾರಂಭದಿಂದ ಸಂಘಟನೆಯೊಳಗಡೆ ಚರ್ಚಿಸಬೇಕಿತ್ತು. ಈ ಸಂಘಟನೆಯೊಳಗಿರುವವರೆಲ್ಲಾ ಜಾತ್ಯಾತೀತ ಕಲ್ಪನೆಯನ್ನು ನಂಬುತ್ತಾರೆಂದು ಕಲ್ಪಿಸಿಕೊಳ್ಳಲಾಗುತ್ತದೆ.

ಬಿ.ಜೆ.ಪಿ.ಯ ಮಹಿಳಾ ಮೋರ್ಚಾ, ಮಹಿಳಾ ಅಗಾಡಿ ಹೆಚ್ಚು ಜನಪ್ರಿಯವಾಗಿರುವುದರ ಜೊತೆಗೆ ಅವುಗಳ ಸದಸ್ಯತ್ವವೂ ಹೆಚ್ಚಾಗುತ್ತಿದೆ. ಅವರು ನಮ್ಮ ಪರಿಭಾಷೆಯನ್ನು ಬಳಸುತ್ತಿದ್ದಾರೆ. ವರದಕ್ಷಿಣೆ, ಅತ್ಯಾಚಾರ ಮುಂತಾದವುಗಳ ಚರ್ಚೆಯನ್ನು ಅನುಕೂಲವಾಗುವ ಹಂತದವರೆಗೆ ಬಳಸಿಕೊಂಡು ನಂತರ, ಕುಟುಂಬ, ಪಿತೃಪ್ರಧಾನ ಸಂಸ್ಕೃತಿಯನ್ನು ಬಲಪಡಿಸಿ ಕೊಳ್ಳಲು ಉಪಯೋಗಿಸುತ್ತಾರೆ.

ಸೂರತ್‌ನಲ್ಲಿ ನಡೆದ ಮತೀಯ ಪ್ರೇರಿತ ಅತ್ಯಾಚಾರಗಳನ್ನು ಕುರಿತು ಬಿ.ಜೆ.ಪಿ. ಮೋರ್ಚಾದ ಹೆಂಗಸರನ್ನು ಭೇಟಿ ಮಾಡಿ, ಸ್ತ್ರೀಯರಾಗಿ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದರೆ, ಕಾಶ್ಮೀರಿ ಪಂಡಿತರ ಹೆಣ್ಣು ಮಕ್ಕಳ ಮೇಲೆ ನಡೆದ ಅತ್ಯಾಚಾರವನ್ನು ಕುರಿತು ಮಾತನಾಡುತ್ತಾರೆ. ಮುಳ್ಳಿನಿಂದ ಮುಳ್ಳನ್ನು ತೆಗೆಯುವುದು ಅವರ ಧೋರಣೆ. ಈ ತರದ ರಾಜಕೀಯ ಧೋರಣೆಯನ್ನು ಆಚರಿಸುವುದು ಅಪಾಯಕಾರಿ ಯಾದುದು. ಇಂತಹ ಅತ್ಯಾಚಾರಗಳು, ದಲಿತ, ಹಿಂದೂ ಹೆಂಗಸರ ಮೇಲೂ ನಡೆಯಬಹುದು. ಬಾಂಬೆಯಲ್ಲಿ ನಡುರಾತ್ರಿಯಲ್ಲಿ ಗರ್ಭಿಣಿ ಮುಸ್ಲಿಂ ಹೆಂಗಸನ್ನು ಬೆಸ್ತ ಮಹಿಳೆಯೊಬ್ಬರು ಲಾಠಿಯಿಂದ ಅಮಾನುಷವಾಗಿ ಹೊಡೆಯುತ್ತಿದ್ದಳು. ಅವಳನ್ನು ನಾವು ಕೆಲವರು ರಕ್ಷಿಸಿ ಆಸ್ಪತ್ರೆಗೆ ಸೇರಿಸಿದೆವು. ಬೆಸ್ತರು ಹಿಂದೆ ಶಿವಸೇನೆಯವರೊಂದಿಗೆ ಇರಲಿಲ್ಲ. ಇಂದು ಅವರೊಂದಿಗಿದ್ದಾರೆ. ಬೇರೆ ಪಕ್ಷಗಳು ಅವರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ.

ಗೂಂಡಾಗಿರಿ, ಹಿಂಸೆ, ಲೂಟಿ ಮಾಡಲು ಹೆಂಗಸರು ತಮ್ಮ ಗಂಡಸರನ್ನು ಪ್ರೇರೇಪಿಸುತ್ತಿದ್ದರು. ಈ ಮೊದಲು ಮತೀಯ ಗಲಭೆಗಳು ನಡೆದ ಸಂದರ್ಭದಲ್ಲಿ ಹೆಂಗಸರು ಹೆಂಗಸರಿಗೆ ಬೆಂಬಲ ನೀಡುತ್ತಿದ್ದರು. ಈ ಹಿಂಸೆಯ ನಿಜವಾದ ಬಲಿಪಶುಗಳು ಸ್ತ್ರೀಯರೆಂಬ ಅರಿವು ಅವರಿಗಿತ್ತು. ಆದರೆ ಇಂದು ವಾತಾವರಣ ಬದಲಾಗಿದೆ. ದಕ್ಷಿಣ ಭಾರತದಿಂದ 20 ಸಾವಿರ ಹೆಂಗಸರು ಕರಸೇವಿಕಾಗಳಾಗಿ ಹೋಗಿದ್ದುದನ್ನು ನಾವು ನೆನಪಿಸಿಕೊಳ್ಳಬೇಕು. ಹಿಂದೆ ಪುರುಷರು ಮತೀಯ ಗಲಭೆಯಲ್ಲಿ ತೊಡಗಿದ್ದರೆ, ಮಹಿಳೆಯರು ನೊಂದವರಿಗೆ ರಕ್ಷಣೆ ನೀಡುತ್ತಿದ್ದರು. ಮತೀಯ ಕಾರಣದಿಂದ, ಒಬ್ಬ ಹೆಂಗಸು ಇನ್ನೊಬ್ಬ ಹೆಂಗಸನ್ನೂ ಅಮಾನುಷವಾಗಿ ಹೊಡೆಯುವುದನ್ನು ನಾನು ಇದುವರೆಗೆ ನೋಡಿರಲಿಲ್ಲ.

ದುರ್ಗಾವಾಹಿನಿಯು ಹಿಂಸಾತ್ಮಕ ಚಟುವಟಿಕೆಗಳಿಗೆ ನೇರವಾಗಿ ಪ್ರೇರಣೆ ನೀಡುತ್ತಿರುವುದು ಕಂಡುಬರುತ್ತಿದೆ. ಸಾಧ್ವಿರಿತಾಂಬರ ಹಿಂಸಾತ್ಮಕ ಚಟುವಟಿಕೆಗಳಿಗೆ ಕರೆ ನೀಡುತ್ತಾರೆ. ಮಹಿಳಾ ಚಳುವಳಿಯ ತಪ್ಪನ್ನು ನಾವು ಗುರುತಿಸಬೇಕಾಗುತ್ತದೆ. ನಾವು ಇಂತಹ ಸಮಸ್ಯೆಗಳನ್ನು ಸದಾ ಚರ್ಚಿಸುತ್ತೇವೆ. ಆದರೆ ಚರ್ಚೆಗಿಂತ ಮುಂದೆ ನಾವು ಹೋಗುವುದೇ ಇಲ್ಲ. ●

ಸಂಕಟ ದಿನಗಳಲ್ಲಿ

ಹವಾಗುಣ ಅಷ್ಟೇನೂ
ಹಿತವಾಗಿಲ್ಲ.
ಕಾರ್ಗತ್ತಲು, ಧೂಳು ಮೋಡಗಳು
ಭಯಂಕರ ಬಿರುಗಾಳಿ
ಈ ಸಂಕಟದ ದಿನಗಳಲ್ಲಿ
ಅನಿರೀಕ್ಷಿತ ಘಟನೆಗಳು
ಘಟಿಸುತ್ತಲೇ ಇರುತ್ತವೆ.
ಕಾಲಿಲ್ಲದ ಕಪೋಲ ಕಲ್ಪಿತ ಸುದ್ದಿಗಳು
ಭೀತಿ ಮೋಡಗಳನ್ನು ಕವಿಸುತ್ತವೆ.
ವಾತಾವರಣದ ಕೊರಳು ಹಿಂಡುತ್ತವೆ.
ಅವಿಶ್ವಾಸದಲೆಯ ಸಾಗರ
ಅನಿಶ್ಚಿತತೆ, ಆತಂಕಗಳ
ಕ್ಷಿತಿಜದಲಿ ಹರಡುತ್ತದೆ
ಎಷ್ಟು ವಿಚಿತ್ರವಾಗಿದೆ!!

ಇಲ್ಲಿ ಮನುಷ್ಯ ಸಾಯುವುದಿಲ್ಲ
ಹಿಂದೂಗಳು ಸಾಯುತ್ತಾರೆ
ಸಿಕ್ಖರು ಸಾಯುತ್ತಾರೆ
ಆತಂಕವಾದಿಗಳು ಇಲ್ಲವೆ
ಸ್ವಜನ ಕರ್ಮಿಗಳು ಸಾಯುತ್ತಾರೆ!!
ಎಲ್ಲೆಲ್ಲೂ ಮುರಿದ ಮನೆ
ಉಕ್ಕುವ ಬಿಕ್ಕುಗಳು
ಶೃಂಗಾರಗೊಂಡ ಕಾಡಿಗೆ ಕಣ್ಣುಗಳಲ್ಲಿ
ಭೀತಿ, ಸಾವಿನ ಭಾವ
ರಕ್ತದಲಿ ತೊಯ್ದ ಕನಸುಗಳ
ಆಕಾಶದಡಿಯಲ್ಲಿ
ಸಂಕಟದ ದಿನಗಳಲ್ಲಿ
ಹೇಗೆ ಬದುಕುತ್ತಿದ್ದೇವೆ-ನಾವು!!

- *ಬಲ್‌ಬೀರ್ ಪರವಾನಾ*

ಮತಾಂಧರ ವಿರುದ್ಧ ತಸ್ನಿಭಾನು ಬಂಡಾಯ

ಉತ್ತರ ಕೇರಳದ ಒಂದು ಪಟ್ಟಣ ಮಂಜಿರೆ. ಇಸ್ಲಾಂ ಮೂಲಭೂತವಾದಿ ಆಕ್ರಮಣಕ್ಕೆ ಇಲ್ಲಿನ ಜನತೆ ಬಲಿಯಾಗುತ್ತಿರುವ ಹಲವು ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಇಂಥವುಗಳ ಪೈಕಿ ಇತ್ತೀಚಿನದು ತಸ್ನಿಭಾನು ಬಂಡಾಯ.

ಯುನಿಟಿ ಕಾಲೇಜಿನ ವಿದ್ಯಾರ್ಥಿನಿ ಈ ತಸ್ನಿಭಾನು. ಎಡಪಂಥೀಯ ವಿಚಾರಧಾರೆಯತ್ತ ಆಕರ್ಷಿತಳಾದ ಈ ವಿದ್ಯಾರ್ಥಿನಿ ಕಾಲೇಜು ದಿನಗಳಲ್ಲಿ ಕಾಲೇಜಿನ ಮ್ಯಾಗ್‌ಜಿನ್‌ಗೆ ಸಂಪಾದಕಿಯಾಗಿ ಆಯ್ಕೆಯಾದಳು. ವಿದ್ಯಾವಂತ ವಿದ್ಯಾರ್ಥಿನಿಯರು ಜಾತ್ಯಾತೀತ ಚಿಂತನೆಯ ಚರ್ಚೆ ಪ್ರಾರಂಭಿಸುವುದು ಕಾಲೇಜಿನ ಸಾಂಪ್ರದಾಯಕ ಮುಸಲ್ಮಾನ ಟ್ರಸ್ಟಿಗಳ ಉರಿಗಣ್ಣಿಗೆ ಗುರಿಯಾಯಿತು. ತಸ್ನಿ ಹಾಗೂ ಆಕೆಯ ಗೆಳತಿಯರು ಕಾಲೇಜಿನ ಆರ್ಟ್ಸ್ ಕ್ಲಬ್ ಉದ್ಘಾಟನೆಗೆ ಚಿಂತಕ ಬರಹಗಾರರನ್ನು ಆಹ್ವಾನಿಸಿದಾಗ ಟ್ರಸ್ಟಿ ಮತ್ತು ವಿದ್ಯಾರ್ಥಿನಿಯರ ಮಧ್ಯೆ ಮಾತಿನ ಚಕಮಕಿ ಕೂಡ ನಡೆಯಿತು.

ಈ ಹಂತದಲ್ಲಿ ಮಧ್ಯ ಪ್ರವೇಶಿಸಿದ್ದು NDF (ನ್ಯಾಷನಲ್ ಡೆಮಾಕ್ರೆಟಿಕ್ ಫ್ರಂಟ್). ಈ ಸಂಸ್ಥೆ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರವೇಶ ಪಡೆದದ್ದು ತಾನು ಶಿಕ್ಷಣದ ರಕ್ಷಣೆ ಮಾಡುವುದಾಗಿ ಹೇಳಿಕೊಂಡು. ಆದರೆ ವಾಸ್ತವವಾಗಿ ಇದು ಒಂದು ಮುಸ್ಲಿಂ ಮತಾಂಧ ಸಂಸ್ಥೆ. ಏಕೆಂದರೆ ಇದರ ಮೂಲಬೇರುಗಳಿರುವುದು ISS ಇಸ್ಲಾಮಿಕ್ ಸೇವಕ್ ಸಂಘದಲ್ಲಿ.

ಇದು ಮುಸ್ಲಿಂ ವಿದ್ಯಾರ್ಥಿನಿಯರು ನಾಟಕದಲ್ಲಿ ಪಾತ್ರ ಮಾಡುವುದನ್ನು ನಿರಾಕರಿಸುತ್ತದೆ. ಮುಸ್ಲಿಂ ಅಂಗಡಿ ಮಾಲೀಕರು ಹಿಂದೂ ಪೂಜಾ ಸಾಮಗ್ರಿಗಳನ್ನು, ಕ್ರಿಸ್‌ಮಸ್ ನಕ್ಷತ್ರಗಳನ್ನು ಮಾರಾಟ ಮಾಡಬಾರದೆಂದು ಹೇಳುತ್ತದೆ. ಇಂಥ NDF ತಸ್ನಿಭಾನುಗೆ ಎಚ್ಚರಿಕೆ ನೀಡಿತು. ಮುಸ್ಲೀಮೇತರ ಸಹಪಾಠಿಯೊಂದಿಗೆ ಮಾತನಾಡಕೂಡದೆಂದು ತಾಕೀತು ಮಾಡಿತು. ಇಂಥ ಒಂದು ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ NDF ತಲೆಹಾಕಿದಾಗ, ತಸ್ನಿಭಾನು ಈ ಬಗ್ಗೆ ಪೊಲೀಸರಿಗೆ ದೂರಿತ್ತಳು. ದೂರನ್ನು ದಾಖಲು ಮಾಡಿಕೊಳ್ಳಲು ಪೊಲೀಸರು ಹಿಂದೆ ಮುಂದೆ ನೋಡಿದಾಗ ಆಕೆ ಪ್ರತಿಭಟಿಸಿದಳು.

ಒಟ್ಟಾರೆ ಮುಸ್ಲಿಂ ಮತಾಂಧರ ನಿಲುವನ್ನು ತಸ್ನಿಭಾನು ಧೈರ್ಯದಿಂದ ಮೆಟ್ಟಿ ನಿಂತಳು. ಈ ಘಟ್ಟದಲ್ಲೇ ತಸ್ನಿಭಾನು ಹಾಗೂ ಉದಾರವಾದಿ ಯುವಕ ನಜೀರ್‌ರವರ ಸ್ನೇಹ ಪ್ರೇಮವಾಗಿ ಮಾರ್ಪಟ್ಟು, ಇಬ್ಬರೂ ಮದುವೆಯಾಗಲು ನಿರ್ಧರಿಸಿದರು. ಈ ಮದುವೆಯನ್ನು ಸಾಂಪ್ರದಾಯಿಕವಾಗಿ ನಡೆಸಿಕೊಡಲು ತಸ್ನಿಭಾನು ಕುಟುಂಬದವರು ಮುಂದೆ ಬಂದರು. ಆದರೆ ಇದಕ್ಕೂ ಮುನ್ನ ತಸ್ನಿ ಹೈಕೋರ್ಟಿನ ನ್ಯಾಯಾಧೀಶರ ಮುಂದೆ ತಾನು ತನ್ನ ಪ್ರಿಯತಮ ನಜೀರ್‌ನೊಂದಿಗೆ ಯಾವುದೇ ಧರ್ಮದ ಕಟ್ಟುಪಾಡುಗಳಿಲ್ಲದೆ ಮದುವೆಯಾಗಲು ನಿರ್ಧರಿಸಿರುವುದಾಗಿ, ಹಾಗಾಗಲು ಬೇಕಾಗುವ ಎಲ್ಲಾ ರಕ್ಷಣೆ ಒದಗಿಸುವಂತೆ ಮನವಿ ಮಾಡಿಕೊಂಡಿದ್ದಳು. ಕೋರ್ಟ್ ಅವಳಿಗೆ ರಕ್ಷಣೆ ನೀಡಿತು. ಈ ಮೂಲಕ ಹೊಸ ಬಂಡಾಯ ಹೂಡಿದ ತಸ್ನಿಭಾನು ಧಾರ್ಮಿಕ ವಿಧಿ-ವಿಧಾನಗಳಿಲ್ಲದೆ ಸರಳ ಹಾಗೂ ರಿಜಿಸ್ಟರ್ಡ್ ಮದುವೆಯನ್ನು ನಜೀರ್ ಜೊತೆ 19-2-99ರಂದು ಮಂಜಿರೆಯ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಪೊಲೀಸ್ ರಕ್ಷಣೆಯಲ್ಲಿ ಆದಳು. ಮುಸ್ಲೀಂ ಸಂಪ್ರದಾಯವಾದಿಗಳಿಗೆ ತೀವ್ರ ಆಘಾತವಾಯಿತು. ಆದರೂ ತಸ್ನಿಭಾನು ಧೈರ್ಯ ಹಾಗೂ ಉದಾರವಾದಿ, ವಿಚಾರ ಕುರಿತ ನಿಷ್ಠೆಗಳ ಮುಂದೆ ಮುಸ್ಲಿಂ ಮತಾಂಧರ ಆಟ ನಡೆಯಲಿಲ್ಲ.

ಈ ಹಿಂದೆ ಈ ಭಾಗದಲ್ಲಿ ಎಲ್ಲಾ ಧರ್ಮೀಯ ರೋಗಿಗಳಿಗೆ ಔಷಧಿ ನೀಡುತ್ತಿದ್ದ ಎಂಬ ಕಾರಣಕ್ಕಾಗಿ ತಿರುವಲ್ ಮೂಲದ ಮುಸ್ಲಿಂನನ್ನು ಕೊಲೆಗೈದ ಪ್ರಕರಣದ ಆಪಾದನೆ NDF ಕಾರ್ಯಕರ್ತರ ಮೇಲಿದೆ; ಮಲ್ಲಾಪುರಂ ಗ್ರಾಮದ ಇಬ್ಬರು ಮುಸಲ್ಮಾನ ಮಹಿಳೆಯರು ವೇಶ್ಯಾವೃತ್ತಿ ನಡೆಸುತ್ತಿದ್ದರೆಂಬ ಕಾರಣಕ್ಕಾಗಿ NDF ಅವರನ್ನು ಬೆತ್ತಲೆ ಮೆರವಣಿಗೆ ಶಿಕ್ಷೆಗೆ ಗುರಿಪಡಿಸಿತ್ತು. ರಂಜಾನ್‌ನಲ್ಲಿ ಉಪವಾಸ ಮಾಡುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು NDF ಹಲವು ಮನೆಗಳ ಮೇಲೆ ದಾಳಿ ಮಾಡಿತ್ತು. ಶಿಕ್ಷಕರೊಬ್ಬರು ಬರ್ಟ್ರೆಂಡ್ ರಸೆಲ್ ಮುಂತಾದ ಉದಾರವಾದಿ ಪಾಶ್ಚಾತ್ಯ ಚಿಂತಕರ ಚಿಂತನೆಯ ಪ್ರಬಂಧಗಳನ್ನು ಬೋಧಿಸಿದರೆಂದು ಅವರಿಗೆ ಎಚ್ಚರಿಕೆ ನೀಡಿತು. ಆರಂಭದ ಕಾಲದಲ್ಲಿ ತಸ್ನಿಭಾನುಗೆ ಒತ್ತಾಸೆಯಾಗಿ ನಿಂತ ನ್ಯಾಷನಲ್ ಅಸೋಸಿಯೇಷನ್‌ನ ಸೆಕ್ರೆಟರಿಯವರ ಮನೆ ಮುಂದೆ NDF ದಾಳಿ ಮಾಡಿತ್ತು.

ಇಂಥಹ ಮತಾಂಧ ಸಂಘಟನೆ ತನ್ನ ಮೇಲೆ ಕಣ್ಣಿಟ್ಟಿರುವುದು ತಿಳಿದ ಬಳಿಕವೂ ತಸ್ನಿಭಾನು ಬಂಡಾಯವೆದ್ದಿದ್ದನ್ನು ಮಾಧ್ಯಮಗಳು ಪ್ರಸಾರ ಮಾಡಿವೆ. ತಸ್ನಿಭಾನು ಬಂಡಾಯವೆದ್ದ ಬಳಿಕ ಉತ್ತರ ಕೇರಳದಲ್ಲಿ, ಹೊಸಗಾಳಿ ಬೀಸಿದಂತಾಗಿದೆ. ಏಕೆಂದರೆ ಈ ಪ್ರಕರಣ ಮಾಧ್ಯಮದ ಗಮನ ಸೆಳೆದ ನಂತರ ಅನೇಕ ಮುಸಲ್ಮಾನ ಮಹಿಳೆಯರು ರಾಜ್ಯ ಮಹಿಳಾ ಆಯೋಗದ ಮುಂದೆ ತಮ್ಮ ಮೇಲಿನ ದೌರ್ಜನ್ಯಗಳ ಬಗ್ಗೆ ದೂರು ನೀಡುತ್ತಿದ್ದಾರೆ.

ತಸ್ನಿಭಾನು ಪ್ರಕರಣದಲ್ಲಿ ತನ್ನ ಹಸ್ತವೇನೂ ಇಲ್ಲವೆಂದು, ತಮ್ಮ ಸಂಘಟನೆ ಸಮಾಜದ ಬೆಳವಣಿಗೆಗಾಗಿ ಮತ್ತು ಮಾನವ ಹಕ್ಕುಗಳ ರಕ್ಷಣೆಗಾಗಿ ಶಾಂತರೀತಿಯ ಪ್ರಚಾರಾಂದೋಲನವನ್ನು ಕೈಗೊಂಡಿದೆ ಎಂದು NDFನ ಜನರಲ್ ಸೆಕ್ರೇಟರಿ ಅಷರಫ್ ಬಿನ್ ಆಲಿ ತಿಳಿಸಿದ್ದಾರೆ.

ತಸ್ನಿಭಾನು ನಡೆಸಿದ ಸಾಹಸದ ಹೋರಾಟದತ್ತ ಮಾಧ್ಯಮಗಳ ಗಮನ ನೀಡಿದ್ದರೂ, ರಾಜ್ಯದ ವಿವಿಧ ಜನ ಸಂಘಟನೆಗಳ-ಮಾನವ ಹಕ್ಕು ರಕ್ಷಕರ-ರಾಜಕೀಯ ಪಕ್ಷಗಳ ಗಮನ ಮಾತ್ರ ಇನ್ನೂ ಇತ್ತ ಹರಿದಿಲ್ಲ. ಅವರ್‍ಯಾರು ಈ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿಲ್ಲ. ಸಾಕ್ಷರತೆ ಗರಿಷ್ಠ ಪ್ರಮಾಣದಲ್ಲಿದ್ದರೂ, ದಶಕಗಳ ಕಾಲ ಕಮ್ಯೂನಿಸ್ಟ್ ಆಡಳಿತವಿದ್ದರೂ ಕೇರಳ ಸಮಾಜ ಸನಾತನವಾದಿ ಚಿಂತನೆಯಿಂದ ಸಂಪೂರ್ಣವಾಗಿ ಹೊರಬಂದಿಲ್ಲ ಎಂಬುದನ್ನು ಸಿದ್ಧಪಡಿಸಲು ತಸ್ನಿಭಾನು ಪ್ರಕರಣ ತಾಜಾ ಸಾಕ್ಷಿ.

(ಸಂಗ್ರಹ).

ಕೈಗೆಟುಕದಾಗಿರುವ ಪಡಿತರ ಧಾನ್ಯ

ಒಂದು ಅಂದಾಜಿನ ಪ್ರಕಾರ ದೇಶದ ಶೇ. 2/3 ಭಾಗ ಜನಸಂಖ್ಯೆ ಪಡಿತರ ಸರಬರಾಜನ್ನೇ ತನ್ನ ಜೀವನೋಪಾಯಕ್ಕೆ ಅವಲಂಬಿಸಿದೆ. ಈ ನ್ಯಾಯಬೆಲೆ ಅಂಗಡಿಗಳ ದುರ್ವ್ಯವಹಾರಗಳನ್ನು ಬದಿಗಿಟ್ಟು ನೋಡಿದರೂ ಕೂಡ ಅಷ್ಟಿಷ್ಟು ಬಡವರ, ಮಧ್ಯಮ ವರ್ಗದವರ ಪಾಲಿನ ಆಶಾಕಿರಣಗಳಾಗಿ ಕಂಡುಬರುತ್ತಿರುವುದು ಸತ್ಯ. ಆರ್ಥಿಕವಾಗಿ ಸಂಕಷ್ಟದಲ್ಲಿರುವವರ ಆಧಾರವನ್ನೇ ಕಿತ್ತುಕೊಳ್ಳುವುದು ಜನವಿರೋಧಿ ನೀತಿ. ಇಂಥ ನೀತಿ ಅನುಸರಿಸುವ ಮೂಲಕ, ದೇಶದ ಕಡುಬಡವರನ್ನು ಮತ್ತೆ ಶ್ರೀಮಂತರ ಬಳಿ ಮಂಡಿಯೂರಿ ಕುಳಿತುಕೊಳ್ಳುವಂತೆ ಬಿಜೆಪಿ ಸರ್ಕಾರ ಬಲಾತ್ಕರಿಸಿದೆ. ಮಧ್ಯಮ, ಕೆಳ ಮಧ್ಯಮ ಮತ್ತು ಕೆಳ ವರ್ಗಗಳ ಬದುಕನ್ನು ಬೀದಿಪಾಲು ಮಾಡಿ, ಅವರು ಗಂಜಿಗೂ ಪರದಾಡುವಂತೆ ಮಾಡಿರುವ ಬಿಜೆಪಿ ನೀತಿಯನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳಬೇಕು.

ನಾವು ಈ ಬಗ್ಗೆ ಮಹಿಳೆಯರನ್ನು ಪ್ರಶ್ನಿಸಿದೆವು. "ಇವರಿಗೆ ಬಡವರನ್ನ ಬಿಟ್ರೆ ಇನ್ಯಾರೂ ಸಿಕ್ಕಲ್ವಾ?", "ನಾವೇನು ಮೋಜು ಕೇಳಿದ್ವಾ, ಮಜಾ ಉಡಾಯಿಸ್ತಾ ಇದೀವಾ? ಸಂಸಾರದ ಎರಡು ಹೊತ್ತಿನ ಊಟಕ್ಕೆ ಹೊಂದಿಸಿಕೊಂಡು ಇಷ್ಟೇ ಎಂದು ನಿಗಧಿಪಡಿಸಿದ್ದನ್ನ ದಿನಗಟ್ಲೇ ಕ್ಯೂ ನಿಂತು ತರುತ್ತಿದ್ದೆವು. ಅದರ ಮೇಲೂ ಇವರ ಕಣ್ಣು ಬಿತ್ತಲ್ಲಾ?" ಯಾವ ಪಕ್ಷ ಬಂದ್ರೂ ಬಡವರನ್ನ ಸುಲಿಯೋದು ತಪ್ಪಲಿಲ್ಲ. ಅಕ್ಕಿ, ರಾಗಿ, ಗೋಧಿ ಇವಕ್ಕೆ ಬಂತಲ್ಲ ಹೊತ್ಗಾಲ ಅನ್ನೋದೇ ಆಗಿತ್ತು. "ಯಾರನ್ನು ಕೇಳುವುದು, ಯಾರಿಗೆ ಹೇಳುವುದು" ಎಂಬುದು ಅವರ ಸಾಮಾನ್ಯ ಉತ್ತರವಾಗಿತ್ತು.

ಅಲ್ಲಲ್ಲಿ ಪ್ರತಿಭಟನೆ ನಡೆದಿದ್ದರೂ ಸರ್ಕಾರ "ಬದಲಾವಣೆಯ ಮಾತೇ ಇಲ್ಲ" ಎಂದು ನಿರ್ದಾಕ್ಷಿಣ್ಯ ಉತ್ತರ ನೀಡಿದೆ. ಸರ್ಕಾರದ ಈ ನಿಲುವು ಜನರನ್ನು ವಿಚಾರ ಮಾಡಲು ಪ್ರೇರೇಪಿಸಬೇಕಾಗಿದೆ.

ಅಶಕ್ತರನ್ನು ಹೀಗೆ ಬಗ್ಗು ಬಡಿಯುವುದು ರಾಜಕೀಯ ದ್ರೋಹ; ಢಂಬಾಚಾರ. ಈಗಾಗಲೇ ಅರೆ ಹೊಟ್ಟೆ ಆಹಾರ, ಅಪೌಷ್ಟಿಕತೆಯಿಂದ ನರಳುತ್ತಿರುವ ಭಾರತೀಯ ಮಹಿಳೆ ಮತ್ತು ಮಕ್ಕಳ ಮೇಲೆ ಸರ್ಕಾರದ ಪಡಿತರ ನೀತಿ ಸಿಡಿಲಿನಂತೆರಗಿದೆ.

ಸರ್ಕಾರದ ಈ ಹೊರೆಯಿಂದ ಹೆಚ್ಚು ಸಂಕಷ್ಟಕ್ಕೊಳಗಾಗುವವರು ಇಲ್ಲಿನ ಮಹಿಳೆಯರು. ಅವರಾದರೂ ಎಷ್ಟೂಂತ ಬಾಗಿಯಾರು? ಹೊರೆ ಜಾಸ್ತಿ, ಜಾಸ್ತಿಯಾದರೆ ಅಬ್ಬಬ್ಬಾ ಅಂದರೆ ಭೂಮಿವರೆಗೆ ಬಾಗಿಯಾರು? ಆದರೆ ಹೊರೆ ಇನ್ನೂ ಹೆಚ್ಚಾಗುತ್ತಾ ಹೋದಾಗ, ಹೊರಗೆ ಕಾರಣರಾದವರ ಕಣ್ಣು ತೆರೆಸಲು, ಅವರಿಗೆ ಬುದ್ಧಿ ಕಲಿಸಲು ಮಹಿಳೆಯರೇ ಮುಂದಾದರು; ಹೀಗಾಗಲಿ ಎಂಬುದೇ ನಮ್ಮ ಆಶಯ.

- ಬಿ. ಎನ್. ಶಾರದ

ಸತಿ ಪದ್ಧತಿ ಸಮರ್ಥಿಸುವ ಮತಾಂಧರು

ವಿಶ್ವ ಹಿಂದೂ ಪರಿಷತ್‌ನ 8ನೇ ಧರ್ಮ ಸಂಸದ್ ಇತ್ತೀಚೆಗೆ ಅಹ್ಮದಾಬಾದಿನಲ್ಲಿ ಸಭೆ ಸೇರಿ ಧರ್ಮರಕ್ಷಣೆಗೆ ಕೊಟ್ಟ ಆದೇಶಗಳಲ್ಲಿ ಸತಿ ಸಹಗಮನ ಪದ್ಧತಿಯ ಪುನರಾರಂಭ ಕೂಡ ಒಂದು. ಪರಿಷತ್‌ನ ರಾಷ್ಟ್ರೀಯ ಉಪಾಧ್ಯಕ್ಷ ಗಿರಿರಾಜ್ ಕಿಶೋರ್, ಈ ವರ್ಷದ ಯುಗಾದಿಯಿಂದ "ಹಿಂದೂ ಶತಮಾನ"ವನ್ನು ಅನುಷ್ಠಾನಗೊಳಿಸುವುದಾಗಿ ತಿಳಿಸಿದ್ದು, ಧರ್ಮ ರಕ್ಷಣೆಗೆ ಹಾಗೂ ಸನಾತನ ಪರಂಪರೆಯ ಉಳಿವಿಗಾಗಿ ಸತಿ ಪದ್ಧತಿಯನ್ನು ಪುನರಾರಂಭಿಸುವುದಾಗಿ ಹೇಳಿದ್ದಾರೆ.

ಹಿಂದೂ ಧರ್ಮದ ಕಪ್ಪು ಚುಕ್ಕೆಗಳಲ್ಲಿ ಒಂದಾದ ಸತಿ ಸಹಗಮನದಂಥ ಅನಿಷ್ಟ ಪದ್ಧತಿಗಳ ಅಳಿವಿಗೆ ಅಸಂಖ್ಯ ಸಮಾಜ ಚಿಂತಕರು ಜನರನ್ನು ಜಾಗೃತಗೊಳಿಸಿದ್ದಾರೆ. ಇಂದು ಮೂಲೆಗುಂಪಾಗಿರುವ ಇಂಥ ವಿಕೃತ ರೂಪಗಳನ್ನು ಪುನರುತ್ಥಾನಗೊಳಿಸುವ ಹಿಂದೂ ಸನಾತನವಾದಿಗಳ ಹುನ್ನಾರವನ್ನು ಈ ನಾಡಿನ ಜನ ಅರ್ಥಮಾಡಿಕೊಳ್ಳಬೇಕು. ಈ ಹಿಂದೂ ಮತಾಂಧರು ಇನ್ನೂ ಎಂಥೆಂಥ ಆತಂಕಕಾರಿ ಮನುಷ್ಯ ಕುಲ ವಿರೋಧಿ ವಿಷಯಗಳನ್ನು ಹುಟ್ಟುಹಾಕಿ ಜನ ಜೀವನವನ್ನು ತಲ್ಲಣಗೊಳಿಸಲಿದ್ದಾರೆಯೋ ಏನೋ!

ಸತಿ ಪದ್ಧತಿಯ ಸಮರ್ಥಕರು "ಗಂಡ ಹೆಂಡತಿಯರ ದೇಹ ಮತ್ತು ಆತ್ಮಗಳ ಪರಿಪೂರ್ಣ ಮಿಲನದ ಸಾಕ್ಷ್ಯ ಸತಿ ಪದ್ಧತಿ, ಅದು ಸಮಾಧಿಯ ಆಚೆಗೂ ಇರುವ ಪತ್ನಿತ್ವದ ಆದರ್ಶ" ಎಂದಿದ್ದಾರೆ. ಆದರೆ ಈ ಮಿಲನದ ಆದರ್ಶ ಗಂಡಿಗೆ ಏಕಿಲ್ಲ? ಹಿಂದೂ ಧರ್ಮ ಕೇವಲ ಹೆಣ್ಣಿನ ಮೇಲೇ ಏಕೆ ನಿರ್ಬಂಧ ಹೇರುತ್ತಾ ಬಂದಿದೆ? ಇದು ಅದರ ಲಿಂಗ ಪಕ್ಷಪಾತ ದೃಷ್ಟಿಯ ಸಂಕೇತವಲ್ಲವೇ? ಒಂದರ್ಥದಲ್ಲಿ ಸಂಪ್ರದಾಯವಾದಿ ಸ್ತ್ರೀಯಾಗಿದ್ದರೂ ಎಚ್ಚೆತ್ತುಕೊಂಡು ಇಂಥ ಪಕ್ಷಪಾತದ ಕಟ್ಟುಪಾಡುಗಳ ಬಗ್ಗೆ ಚಿಂತಿಸಬೇಕು; ಮಾನವೀಯ ಸಮಾಜದ ತುಡಿತದಲ್ಲಿರುವ ಜಾಗೃತ ಜನ ಸಮೂಹವನ್ನು ಸೇರಬೇಕು. ಇಲ್ಲದಿದ್ದಲ್ಲಿ ಮಾದಕ ಪಾನೀಯ ಕುಡಿಸಿ ಬಲವಂತವಾಗಿ ದಹನಕ್ಕೆ ದೂಡಿಸಿಕೊಂಡ ರೂಪ ಕನ್ವರ್ ಗತಿ ಎಲ್ಲಾ ಮಹಿಳೆಯರಿಗಾಗಬಹುದು.

ಬಿ.ಜೆ.ಪಿ. - ಕೊಳಕು ಮುಖ ಬಹಿರಂಗವಾದ ಮೇಲಾದರೂ ಜನ ಎಚ್ಚೆತ್ತು ಅಮಾನವೀಯ ಪದ್ಧತಿಗಳ ಪುನರಾಗಮನಕ್ಕೆ ಮುಂಚೆ ಮತಾಂಧ ಶಕ್ತಿಗಳ ವಿರುದ್ಧ ಹೋರಾಡದಿದ್ದರೆ, ನಮಗೆ ನಾವೇ ದ್ರೋಹ ಬಗೆದುಕೊಂಡಂತಾಗುತ್ತದೆ.

- ಬಿ. ಎನ್. ಶಾರದ

ಜನವಾದಿ ಮಹಿಳಾ ಸಂಘಟನೆ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು ನಗರ ಜಿಲ್ಲಾ ಮಹಿಳಾ ಮಂಡಲಗಳ ಒಕ್ಕೂಟ, ಸಂಯುಕ್ತ ಮಹಿಳಾ ವೇದಿಕೆ, ಎಸ್.ಎಫ್.ಐ, ಡಿ.ವೈ.ಎಫ್.ಐ. ಹಾಗು ಪ್ರಗತಿಪರ ಚಿಂತಕರನ್ನೊಳಗೊಂಡ ಸತಿ ಸಮರ್ಥನಾ ವಿರೋಧಿ ವೇದಿಕೆಯವರು ದಿನಾಂಕ 18-2-99ರಂದು ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು. ಸಂಜೆ 4 ಗಂಟೆಗೆ ಮೈಸೂರು ಬ್ಯಾಂಕ್ ವೃತ್ತದಿಂದ ಪುರಭವನದವರೆಗೂ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಪುರಭವನದ ಎದುರು ಬಹಿರಂಗ ಸಭೆಯನ್ನು ನಡೆಸಲಾಯ್ತು. ಸಭೆಯಲ್ಲಿ, ಸತಿ ಪದ್ಧತಿಯ ಪುನರ್ ಸ್ಥಾಪನೆಗೆ ಆದೇಶ ನೀಡಿರುವ ವಿಶ್ವ ಹಿಂದೂ ಪರಿಷತ್‌ನ ನಿಲುವನ್ನು ಖಂಡಿಸಲಾಯ್ತು. ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಸಜೀವವಾಗಿ ಚಿತೆಗೇರಿಸುವ ಧರ್ಮಾಂಧತೆಯನ್ನು ವಿರೋಧಿಸಿ, ಮಾನವೀಯ ಮೌಲ್ಯಗಳನ್ನು ಉಳಿಸಲು ಕರೆ ನೀಡಲಾಯ್ತು.

ದ್ವೇಷದ ರೋಗಾಣುವಿಗೊಂದು ಮದ್ದು!

ಡೆಲ್ಲಿಯಲ್ಲಿ ಫೆಬ್ರವರಿ 4ರಂದು ನನ್ನ ಪರ್ಸ್ ಕಳುವಾಯಿತು. ಆ ದಿನ ಬಾಂಬೆಗೆ ಹೋಗಲು ಡೆಲ್ಲಿಯಲ್ಲಿ ರೈಲು ಹತ್ತಿದೆ. ಪರ್ಸ್ ಕಳುವಾಗಿರುವುದರ ಅರಿವಿಲ್ಲದೆ ರೈಲು ಹತ್ತಿ ನಾನು ಕೂರಬೇಕಾಗಿದ್ದ ಜಾಗದಲ್ಲಿ ಕೂತೆ. ನನ್ನ ಸಾಮಾನುಗಳನ್ನು ಜಾಗ ಮಾಡಿ ಇಟ್ಟೆ. ರೈಲು ಹತ್ತಿದ 2 ಗಂಟೆಗಳ ನಂತರ ಟಿಕೇಟು ಪರೀಕ್ಷಿಸಲು ಟಿ.ಟಿ. ಬಂದಾಗ ನನಗೆ ತಿಳಿಯಿತು, ನನ್ನ ಪರ್ಸ್ ಕಳುವಾಗಿದೆಯೆಂದು, ನನ್ನ ಬಳಿ ಟಿಕೇಟಾಗಲಿ, ಒಂದು ಪೈಸೆಯಾಗಲೀ ಇರಲಿಲ್ಲ. ನನ್ನ ಗುರುತು ಹೇಳುವ ಏನೂ ಇರಲಿಲ್ಲ.

ಟಿಕೇಟ್ ಹುಡುಕಲು ಟಿ.ಟಿ.ಯವರು ನನಗೆ ಇನ್ನಷ್ಟು ಸಮಯ ನೀಡಿದರು. ಕಳವಳಗೊಂಡು, ನಾನು ಹೆಸರಿನ ಪಟ್ಟಿಯಲ್ಲಿ ನನ್ನ ಹೆಸರಿರುವುದಾಗಿ ಹೇಳಿದೆ. ನನ್ನ ಹೆಸರನ್ನು ಖಾತ್ರಿ ಪಡಿಸಲು ನನ್ನ ಬಳಿಯಿದ್ದ ಕಾಗದವೊಂದನ್ನು ಮತ್ತು ಡೈರಿಯೊಂದನ್ನು ತೋರಿಸಿದೆ. ಟಿ.ಟಿ.ಯವರು ಹೊಸದೊಂದು ಟಿಕೇಟನ್ನು ಖರೀದಿಸಬೇಕು, ಇಲ್ಲ ರೈಲು ಇಳಿದು ಹೋಗಬೇಕು, ಮತ್ತೆ ಬೇರೆ ದಾರಿಯೇ ಇಲ್ಲವೆಂದರು.

ಸಹ ಪ್ರಯಾಣಿಕರಲ್ಲೊಬ್ಬರು ಬಾಂಬೆಯವರೆಂದು ತಿಳಿದು ಅವರ ಬಳಿ ಹೋಗಿ ನನ್ನ ವಾಚ್ ಮತ್ತು ಟೇಪ್‌ರೆಕಾರ್ಡರ್ ಅನ್ನು ತೆಗೆದುಕೊಂಡು ಸ್ವಲ್ಪ ಹಣವನ್ನು ನೀಡಬೇಕೆಂದು, ಬಾಂಬೆ ತಲುಪಿದ ಮೇಲೆ ಹಣ ಹಿಂತಿರುಗಿಸಿ ನನ್ನ ವಸ್ತುಗಳನ್ನು ವಾಪಸ್ಸು ತೆಗೆದುಕೊಳ್ಳುವೆನೆಂದು ಹೇಳಿದೆ. ಅವರು ಕೈ ಆಡಿಸಿಬಿಟ್ಟರು. ಉಳಿದವರು ಎಲ್ಲೋ ನೋಡುತ್ತಾ ಕೂತರು.

ಆಗ ಯುವಕನೊಬ್ಬ ನನ್ನ ಬಳಿ ಬಾಗಿ ಐವತ್ತರ ನೋಟೊಂದನ್ನು ನೀಡಿದ. ಧನ್ಯವಾದ ಹೇಳಿ ಅವರ ಹೆಸರು, ವಿಳಾಸ ಹೇಳಿದರೆ ಹಣ ಹಿಂತಿರುಗಿಸುವೆನೆಂದು ಹೇಳಿದೆ. ನಾಚಿಕೊಂಡ ಆತ ಅದು ಸಾಧ್ಯವಿಲ್ಲ, ಯಾಕೆಂದರೆ ನಾನು ಪಾಕಿಸ್ತಾನದವ ಎಂದು ಹೇಳಿದ, ಅಲ್ಲದೆ ಹಣ ಹಿಂದೆ ತೆಗೆದುಕೊಳ್ಳಲು ಅವನು ಬಯಸಲಿಲ್ಲ. ಅವನ ಜೊತೆಯಲ್ಲಿದ್ದ ಮತ್ತೊಬ್ಬರು (ಅವರೂ ಪಾಕಿಸ್ತಾನದವರೆ) ಸಹ ಐವತ್ತು ರೂಪಾಯಿ ನೀಡಿ, ದೇವರು ನನಗೆ ಒಳ್ಳೆಯದು ಮಾಡಲೆಂದು ಕೇಳಿಕೊಂಡರೆ ಸಾಕು, ಹಣ ಹಿಂತಿರುಗಿಸುವುದೇನೂ ಬೇಡವೆಂದರು.

ಅವರಿಬ್ಬರ ವರ್ತನೆಯಿಂದ ಪ್ರಭಾವಿತರಾದ ಇತರ ಭಾರತೀಯ ಸಹ ಪ್ರಯಾಣಿಕರು ಸಹಾಯ ಮಾಡಲು ಮುಂದೆ ಬಂದರು. ಟಿ.ಟಿ.ಯವರು ಮತ್ತೆ ಬಂದಾಗ ಅವರಿಗೆ 100 ರೂ. ಮತ್ತು ನನ್ನ ಬಳಿಯಿದ್ದ ಅಮೂಲ್ಯ ವಸ್ತುಗಳನ್ನು ನೀಡಿದೆ. ಆದರೆ ಟಿಕೇಟ್ ಖರೀದಿಸಲು ಹಣ ನೀಡಲೇಬೇಕಾಗಿತ್ತು. ಆಗ ಆ ಪಾಕಿಸ್ತಾನಿ ಸಹ ಪ್ರಯಾಣಿಕ ನನಗಾಗಿ ಟಿಕೇಟ್ ಖರೀದಿಸುವುದಾಗಿ ಹೇಳಿದ. ಇತರ ಪ್ರಯಾಣಿಕರು ಹಣ ನೀಡಿದರೂ ಸಹ ನನ್ನ ಪಾಕಿಸ್ತಾನಿ ಮಿತ್ರನೆ ಹೆಚ್ಚಿನ ಹಣ ವ್ಯಯಿಸಬೇಕಾಯ್ತು.

ಮಾರನೆಯ ದಿನ ಬಲವಂತವಾಗಿ ನನ್ನ ಬಳಿಯಿದ್ದ ಹೆಚ್ಚಿನ 100/-ರೂ.ವನ್ನು ಹಿಂತಿರುಗಿಸಿ, ಎಲ್ಲರನ್ನು ಒಲೈಸಿ ಅವರುಗಳ ಹೆಸರು, ವಿಳಾಸ ಪಡೆದುಕೊಂಡು ರೈಲಿಳಿದು ವಾಪಸ್ಸಾದೆ. ಧರ್ಮ, ಗಡಿಯನ್ನು ಮೀರಿದ ಮನುಷ್ಯರ ಕರುಣೆ, ಮಾನವೀಯತೆಯನ್ನು ಕಂಡು ಮನ ತುಂಬಿ ಬಂತು. ಕೇವಲ ಮನುಷ್ಯರಂತೆ ಒಬ್ಬರಿಗೊಬ್ಬರು ನಡೆದುಕೊಂಡರೆ ನಿಜವಾಗಿಯೂ ಎರಡೂ ದೇಶದವರು ಸೆಹೋದರ, ಸಹೋದರಿಯರಂತೆ ಬದುಕಬಹುದು.

ನನ್ನ ಹೊಸ ಗೆಳೆಯ ಪರ್ವೇಜ್ ಅಹ್ಮದ್ ದ್ವೇಷದ ರೋಗಾಣುವಿಗೆ ಜೀವಂತ ಪ್ರತ್ಯೌಷಧ.

ಸಂಜಯ್ ಆನಂದ್
Cl-1587, Vasanth Kunj
New Delhi - 110 070

ಕೃಪೆ : ಕಮ್ಯುನಲಿಸಂ ಕಾಂಬ್ಯಾಟ್ ಪತ್ರಿಕೆ

ನಾವು ಅನೇಕರು....

ಒರಿಸ್ಸಾದಲ್ಲಿ ಕ್ರೈಸ್ತ ಧರ್ಮಗುರು ಗ್ರಾಹಂ ಸ್ಟೈನ್ ಹಾಗು ಅವರ ಇಬ್ಬರು ಪುಟ್ಟ ಮಕ್ಕಳ ಸಜೀವ ದಹನ, ಮಧ್ಯ ಪ್ರದೇಶದಲ್ಲಿ ಕ್ರೈಸ್ತ ಸಂನ್ಯಾಸಿನಿಯರ ಮೇಲೆ ಅತ್ಯಾಚಾರ, ಬಿಹಾರದಲ್ಲಿ ರಣವೀರ ಸೇನೆಯವರಿಂದ ದಲಿತರ ಕಗ್ಗೊಲೆ, ಸೂರತ್ಕಲ್ ಬಾಬಾಬುಡನ್‌ಗಿರಿಯಲ್ಲಿ ನಡೆದ ಕೋಮು ದಳ್ಳುರಿಯಂತಹ ಬರ್ಬರ ಕೃತ್ಯಗಳು ಒಂದಾದ ನಂತರ ಒಂದು ನಡೆಯುತ್ತಲೆ ಇವೆ. ಈ ಘಟನೆಗಳಿಂದ ಆತಂಕಗೊಂಡ ಹಲವಾರು ಸಂಘಟನೆಗಳು/ವ್ಯಕ್ತಿಗಳು ಕೋಮುವಾದವನ್ನು ಪ್ರತಿಭಟಿಸುವ ಸಲುವಾಗಿ 'ಅನೇಕ' ಎಂಬ ವೇದಿಕೆಯನ್ನು ಪ್ರಾರಂಭಿಸಿದ್ದಾರೆ. ಮಹಿಳಾ ಗುಂಪುಗಳು, ದಲಿತ ಸಂಘಟನೆಗಳು, ಧಾರ್ಮಿಕ ಸಂಘಟನೆಗಳು, ಲೈಂಗಿಕತೆ ಕುರಿತು ಕೆಲಸ ಮಾಡುತ್ತಿರುವ ಸಂಘಟನೆಗಳು, ಮಾನವ ಹಕ್ಕುಗಳ ಸಂಘಟನೆಗಳು, ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಗಳು, ಸಾಂಸ್ಕೃತಿಕ ತಂಡಗಳು ಸೇರಿದಂತೆ 40ಕ್ಕೂ ಹೆಚ್ಚಿನ ಸಂಘಟನೆಗಳು ಇರುವ 'ಅನೇಕ' ವೇದಿಕೆಯಡಿ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಂಗವಾಗಿ ದಿನಾಂಕ 20.2.99ರಂದು ಬೆಂಗಳೂರಿನ ಮೈಸೂರ್ ಬ್ಯಾಂಕ್ ಸರ್ಕಲ್ ಬಳಿ ಇರುವ ಬನ್ನಪ್ಪ ಪಾರ್ಕಿನಲ್ಲಿ ಪ್ರತಿಭಟನಾ ಧರಣಿಯನ್ನು ಏರ್ಪಡಿಸಲಾಗಿತ್ತು.

ಸೌಹಾರ್ದ ಬದುಕು, ಬಹು ಸಂಸ್ಕೃತಿಯ ಪ್ರತಿಪಾದನೆ, ಧರ್ಮ ನಂಬಿಕೆ, ವಿಶ್ವಾಸ, ಕಾಳಜಿಗಳ ಅಭಿವ್ಯಕ್ತಿಯ ಹಕ್ಕು, ಕೋಮುವಾದ ಹಾಗು ಮೂಲಭೂತವಾದದ ಹಿಂಸೆಯ ಎಲ್ಲಾ ಸ್ವರೂಪಗಳಿಗೆ ವಿರೋಧ, ಧರ್ಮ, ಸಂಸ್ಕೃತಿ, ಜಾತಿ, ವರ್ಗ, ಲಿಂಗ, ಲೈಂಗಿಕತೆ, ಭಾಷೆ, ಬಣ್ಣ, ವಯಸ್ಸು, ಅಂಗ ವೈಕಲ್ಯ ಆಧರಿಸಿ ಕಡೆಗಣಿಸುವಿಕೆ ಹಾಗು ದಮನದ ಎಲ್ಲಾ ಬಗೆಯ ಸ್ವರೂಪಗಳಿಗೆ ವಿರೋಧ - ಈ ನಂಬಿಕೆಗಳಿಗೆ ಒತ್ತು ನೀಡುವ ಕರಪತ್ರವನ್ನು ಆ ದಿನ ಮುಖ್ಯ ರಸ್ತೆಗಳಲ್ಲಿ ಹಂಚಲಾಯ್ತು. ಸಂಜೆ 6 ಗಂಟೆಗೆ ಪ್ರಾರಂಭವಾದ ಪ್ರತಿಭಟನಾ ಸಭೆಯಲ್ಲಿ ಕವಿ, ಪತ್ರಕರ್ತ, ರಂಜಾನ್‌ದರ್ಗಾ ಅವರು ಮಾತನಾಡಿ 'ಅನೇಕ'ದ ಉದ್ದೇಶಗಳನ್ನು ವಿವರಿಸಿದರು. ನಿಡುಮಾಮಿಡಿ ಮಾನವ ಧರ್ಮಪೀಠದ ವೀರಭದ್ರ ಚೆನ್ನಮಲ್ಲಸ್ವಾಮಿಯವರು ಮಾತನಾಡಿ - ಎಲ್ಲಾ ರೀತಿಯ ಕೋಮುವಾದ, ಮೂಲಭೂತವಾದವನ್ನು ವಿರೋಧಿಸಿ, ಮಾನವತೆಯನ್ನು ಎತ್ತಿ ಹಿಡಿಯಲು ಕರೆ ನೀಡಿದರು. ಜನೋತ್ಸವ, ಚೇತನಾ ಸಾಂಸ್ಕೃತಿಕ ತಂಡ ಮತ್ತು ಯುನೈಟೆಡ್ ಥಿಯೋಲಾಜಿಕಲ್ ಕಾಲೇಜಿನವರು ಸರಳ ಬೀದಿ ನಾಟಕಗಳನ್ನು ಪ್ರದರ್ಶಿಸಿದರು. ಮಹಿಳಾ ಜಾಗೃತಿ ಮತ್ತು ಮಾನಸ ಮಹಿಳಾ ಸಂಘಟನೆಗಳು ಕೋಮುವಾದ ವಿರೋಧಿಸುವ ಹಾಡುಗಳನ್ನು ಹಾಡಿದರು.

"ಬಣ್ಣ, ಜಾತಿ, ಮತಗಳ, ದೇಶ ಕಾಲಗಳ ಮೀರಿದ ಮಾನವತೆಯೇ ಧರ್ಮ"

"ಕಾಶಿ ಏನು ಕಾಬಾ ಏನು ಒಂದೆ ನೆಲವು ಹೊತ್ತಿದೆ"

"ದೇವರು, ಧರ್ಮ ಕಾವಿಯ ಸ್ವತ್ತಲ್ಲ, ನೀಲಿ, ನೇರಳೆಯೊಳಗೂ ದೇವರುಂಟು ಸುಳ್ಳಲ್ಲ"

"ಮನುಷ್ಯರನ್ನು ದಹಿಸುವ ನಿಮ್ಮನ್ನು ದೇವನೂ ಸಹಿಸನು" ಎಂಬ ಅರ್ಥಪೂರ್ಣ ಘೋಷಣೆಗಳುಳ್ಳ ಪೋಸ್ಟರ್‌ಗಳು ಮತ್ತು ಅನೇಕತೆಯನ್ನು ಬಿಂಬಿಸುವ ಎಲೆ, ಹೂವಿನಿಂದ ಮಾಡಿದ ಕಾರ್ಡುಗಳನ್ನು ಹಂಚಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಉರಿವ ಮೊಂಬತ್ತಿಗಳನ್ನು ಕೈಯಲ್ಲಿ ಹಿಡಿದು ಎಲ್ಲರೂ ವೃತ್ತಾಕಾರದಲ್ಲಿ ನಿಂತು ಕೋಮು ಸೌಹಾರ್ದತೆಗಾಗಿ ಪ್ರಾರ್ಥಿಸುವ ಮೂಲಕ ಕಾರ್ಯಕ್ರಮ ಕೊನೆಗೊಂಡಿತು.

ಎಲ್ಲಾ ರೀತಿಯ ಮೂಲಭೂತವಾದ, ಕೋಮುವಾದವನ್ನು ವಿರೋಧಿಸಿ, ಕೋಮು ಸೌಹಾರ್ದತೆಯನ್ನು ಸಾಧಿಸುವ ಹಾದಿಯಲ್ಲಿ ಮುಂದುವರಿಯಬೇಕೆಂಬ ಇಚ್ಛೆ 'ಅನೇಕ'ದ್ದು. ಆ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 'ಅನೇಕ' ಪ್ರಯತ್ನಿಸುತ್ತಿದೆ.

●

ನಾವ್ ಯಾರ್ಗೆ ಕಾಯ್ಕಂಡ್ ಕುಂತ್ಕಳನಾ

ಮೀಸಲಾತಿ ರಕ್ಷಣಾ ಸಮಿತಿಯವರು, ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಸಿದ ಅಲ್ಪಸಂಖ್ಯಾತ, ಹಿಂದುಳಿದ, ದಲಿತ ವರ್ಗಗಳ ಬೃಹತ್ ರ್‍ಯಾಲಿಗೆ ಮಾನಸ ತನ್ನ ಬೆಂಬಲ ಸೂಚಿಸಿ, ರ್‍ಯಾಲಿಯಲ್ಲಿ ಪಾಲ್ಗೊಂಡಿತ್ತು. ಸಣ್‌ತಿಮ್ಮಿ ಮಾತಿನಲ್ಲಿ ರ್‍ಯಾಲಿ ಕುರಿತು ವರದಿ ಮಾಡಲಾಗಿದೆ. ಸಣ್‌ತಿಮ್ಮಿ ಒಬ್ಬ ವ್ಯಕ್ತಿಯಲ್ಲ, ತನ್ನ ಸುತ್ತಮುತ್ತಲಿನ ಒಳಿತು, ಕೆಡುಕುಗಳಿಗೆ ಸ್ಪಂದಿಸುವ, ಪ್ರತಿಭಟಿಸುವ ಜೀವಂತ ಚೈತನ್ಯದ ಸಂಕೇತ.

ಆಫೀಸಿನಲ್ಲಿ ವಿಪರೀತ ಕೆಲಸವಿದ್ದುದರಿಂದ, ಎಲ್ಲಾ ಕಡತಗಳನ್ನು ಜೋಡಿಸಿ ಬೀರುವಿನೊಳಗಿಟ್ಟು ಬೀಗ ಹಾಕಿ ಸರೋಜ ಹೊರಡಲು ಎದ್ದಾಗ ರಾತ್ರಿ 8.30. ಈಚೆ ಬಂದು ಮೆಟ್ಟಿಲಿಳಿಯುವಾಗ ಎದುರಿಗೆ ಸುಸ್ತಾಗಿದ್ದ ಸಣ್‌ತಿಮ್ಮಿಯನ್ನು ಕಂಡು ಸರೋಜಳಿಗೆ ಆಶ್ಚರ್ಯ, ಗಾಭರಿ! ಸರೋಜಳ ಗಾಭರಿ ನೋಡಿದ ಸಣ್ ತಿಮ್ಮಿ –

ಅದೇನೆ, ಅಂಗ್ ನೋಡಿಯಾ? ನಮ್ಮೊರ್ದು ಮೆರಣ್ಗೆತ್ತಲ್ಲ ಅದ್ಕುಕ್ ಬಂದಿದ್ದೆ ಕಣೆ. ಸರೋಜಕ್ಕ ಇನ್ನುವೆ ಆಪಿಸಿನ್ ತಾವ ಇದ್ರೆ ಬಿಡ್ತಿನಿ ಇಲ್ಲಾ ಮನೆ ಕರ್‍ಕಂಡೋಗ್ತಿನಿ ಅಂತ ಯಂಕ್ಟೆಸಿ ಇಲ್ಲಿಗ್ ಕರ್‍ಕಂಡ್ ಬಂದ. ನೀನು ಮೆಟ್ಲಿಳಿತಿದ್ದುದ್ ನೋಡಿ ನನ್ನಿಳ್ಸಿ ಅದೇ ಆಟಾದಾಗ ವಾದ ಅಂದ್ಲು.

ಇವತ್ತಿನ ದಲಿತರ ರ್‍ಯಾಲಿಗೆ, ದಂಡಿನ್‌ಶುರದ್ ಸಣ್‌ತಿಮ್ಮಿ ಎಂಗ್ ಬಂದ್ಲು ಅಂತ ಸರೋಜ ತಲೆ ಕೆಡಿಸಿಕಂಡ್ಲು. ಸಣ್‌ತಿಮ್ಮಿಯ ಪರಿಚಯವಿದ್ದ ಸರೋಜ ಇವಳಿಗೆ ಯಾವುದು ಅಸಾಧ್ಯವಿಲ್ಲ ಅನ್ನಿಸಿ ಅವಳ ಕೈ ಹಿಡಿದುಕೊಂಡು ರಸ್ತೆ ದಾಟಿದ್ಲು. ಎದುರಿಗಿರೊ ಶಿರಡಿಬಾಬಾನ ಮಂದಿರ ನೋಡಿ ಸಣ್‌ತಿಮ್ಮಿಯ ದೈವಭಕ್ತಿ ತಿಳಿದಿದ್ದ ಸರೋಜ ಅವಳಿಗೆ ಮಂದಿರ ತೋರಿಸಬೇಕು ಅನ್ನಿಸಿ – ಸಣ್ ತಿಮ್ಮಿ ಬಾರೇ ಈ ಶಿರಡಿಬಾಬಾನ ದೇವಸ್ಥಾನ ನೋಡುಸ್ತಿನಿ ಅಂದ್ಲು.

ದೇವ್‌ಸ್ತಾನ ತೋರಿಯಾ? ತಡ್ಯೆ, ಅಂಗಾರೆ ವಸಿ ಕಡ್ಡಿ, ಕರ್ಪೂರ ತಗಳವ, ಅಂಗೆ ಅಣ್‌ಕಾಯ್ ಮಾಡಸ್ಕಂಡ್ ಒಗಾನ ಅಂದ್ಲು ತಿಮ್ಮಿ.

ಅದೆಲ್ಲ ಈ ದೇವಸ್ಥಾನದಗಿಲ್ಲ, ಬರಿ ಕೈ ಮುಗುದ್ರೆ ಸಾಕು ಬಾರೇ ಅಂತಾ ದೇವಸ್ಥಾನದ ಒಳಗೆ ಸಣ್‌ತಿಮ್ಮಿನ ಕರ್ಕೊಂಡು ಹೋದ್ಲು ಸರೋಜ.

ಸ್ವಲ್ಪ ಗಾಭರಿಯಾದ ಸಣ್ ತಿಮ್ಮಿ ನಮ್ಮೋರು ಒಳಿಕೊರ್‍ಗು ಒಗ್‌ಬೋದನೆ? ಅಂತ ಕೇಳಿದಳು ತಿಮ್ಮಿ.

ಇಲ್ಯಾರ್ ಕೇಳ್ತಾರೆ ಅವುನೆಲ್ಲ ಸುಮ್ಮನೆ ಬಾರೆ ಅಂತ ಕೈಬಿಡ್ದೆ ಒಳಗೆ ಹೋದ್ಲು ಸರೋಜ.

ಶಿರಡಿಬಾಬಾನ ನೋಡಿ ತಿಮ್ಮಿ ಸ್ವಾಮಿ ಪರಮಾತ್ಮ ಅಂತ ಕೈಮುಗ್ದು ಅಡ್ ಬಿದ್ಲು. ಎದ್ದು ಕೇಳಿದಳು ಸಾಬ್ರು ದೇವ್ರನೆ? ಅಂತ.

ಅದಕ್ಕೆ ಸರೋಜೆ – ಎಲ್ರಿಗೂ ದೇವ್ರು ಕಣೆ ಅವ್ನು. ಬದುಕಿದ್ದಾಗ ಎಲ್ಲಾರ್‍ನು ಒಂದೆ ವಿಶ್ವಾಸದಿಂದ ಕಂಡೋನು, ಅದ್ಕೆ ಎಲ್ರೂ ಪೂಜೆ ಮಾಡ್ತರೆ ಅಂದ್ಲು.

ಯಾವ್ ತಾಯಿ ಎತ್ತಿದ್ಲು, ಪುಣ್ಯಾತ್ಮ ಅಂದ್ಲು ತಿಮ್ಮಿ.

ಈಚೆ ಬಂದು ಒಂದು ಆಟೋ ಹಿಡಿದು ಮನೆಗೆ ಕರ್ಕೊಂಡ್ ಬಂದ್ಲು ಸರೋಜ ತಿಮ್ಮೀನಾ.

ಇಬ್ರೂ ಕೈ ಕಾಲ್ ಮುಖ ತೊಳ್ಕೊಂಡ್ರು. ಬೆಳಗ್ಗೆ ಮಾಡಿದ್ದ ಅನ್ನ ಸಾರು ಬಿಸಿ ಮಾಡಿ ಇಬ್ರು ಉಂಡು ಅಂಗಳದಲ್ಲಿ ಕಾಲ್‌ಚಾಚಿ ಕೂತ್ಕೊಂಡು ಮಾತಿಗೆ ಶುರುವಚ್ಕಂಡ್ರು.

ಸರೋಜ : ತಿಮ್ಮಿ ನಿನೆಂಗ್ ಬಂದೆ ಇಲ್ಗೆ?

ಸಣ್‌ತಿಮ್ಮಿ : ಚಿನ್‌ಕೊಟಯ್ಯನುಡ್ಗ ಯಂಕ್ಟೇಸಿ ಕರ್‍ಕಂಡ್ ಬಂದ ಕಣೆ. ನಮ್ಮೋರ ಸಂಗದಾಗವ್ನೆ ಕಣೆ ಅವ್ನು. ಮನ್ನೆ ದಿನ ಮನ್ಗ್ ಬಂದು ಯಕ್ಕೊ ನಮ್ಮೊರೆಲ್ರುವೆ, ಬೆಂಗಳೂರಾಗಿ ಸೇರ್‍ತಾ ಇದೀವಿ. ಸಾಬ್ರು, ಕಿರಿಸ್ತಾನ್ರುವೆ ಬತ್ತಾ ಅವ್ರೆ ನೀನೂ ಬಾ ಅಂದ ಕಣೆ. ಯಂತದೊ ಇಂಜ್‌ನೀರ್‌ಗುಳ್ಗೆ ಅನ್ನಾಯಾಗದಂತಲ್ಲೆ ಪಟೇಲ್ರು ಅವ್ರು ಮುಂದ್ಕ್ ಬರ್‌ದಂಗೆ ಆಗ್ನೆ ಮಾಡೋನಂತೆ. ಅದ್ಕೆ ಎಲ್ರುವೆ ಆಗ್ನೆ ವಾಪ್ಸ್ ತಗಾ ಅಂತ ಕೇಳಾಕೆ ಮೆರಣ್ಗೆ ಒಗ್ತಾ ಇದೀವಿ, ನೀನು ಬಾ ಅಂತ ಕರ್‍ಕಂಡ್ ಬಂದ. ನಿನ್ನುವೆ ನೋಡ್ದಂಗಾಗುತ್ತೆ ಅಂತವ ಕಿಟ್ಟುಡ್ರುಗೆ ದನಗೋಳ ವಸಿ ನೋಡ್ಕಳ್ರಪ್ಪ ಅಂತೇಳಿ ವಂಟ್‌ಬಂದೆ ಕಣೆ.

ಸರೋಜ : ಯಾವ್‌ದ್ರಾಗ್ ಬಂದೆ.

ಸಣ್‌ತಿಮ್ಮಿ : ಸೆಟ್ಲು ಗಾಡ್ಗೆ ಬಂದ್‌ವಿ. ರೈಲಿಳ್ದು, ಬಸ್ ಅತ್ಕಂಡ್ ಮೆರಣ್ಗೆ ಜಾಗ್‌ಕೆ ಒಗಾನ ಅಂತ ಯಂಕ್ಟೇಸಿ ಬಸ್ಸಿನ್‌ತಾಕ್ ಕರ್ಕಂಡ್ ಬಂದು ಬಸ್ ಅತ್ತಿಸ್ದ. ಸ್ವಲ್ಪ ದೂರ ಬರಂಗಿಲ್ಲ, ಬಸ್ ನಿಂತೆ ಬುಡ್ತು. ಪೋಲಿಸೋರು ರಸ್ತೆನೆಲ್ಲ ಬಂದ್ ಮಾಡ್‌ಬುಟ್ಟಿದ್ರು. ಅಲ್ಲಿಂದ ನಡ್ಕಂಡೆ ಒದ್ವಿ, ಮೆರಣ್ಗೆ ಜಾಗ್‌ಕ್ಕೆ, ದೊಡ್ಡಂದ್ ಸರ್ಕೋಲ್‌ತಾಕೆ ಕರ್ಕಂಡೋದ. ಜನ್ರೆಲ್ಲುವೆ ಸೇರ್ತಾ ಇದ್ರು, ಎಲ್ಲಾ ಕಡಿಂದ್ಲು ಜನ ಯಾನ್‌ನಾಗಿ, ಎತ್ನ್‌ಗಾಡಿನಾಗೆ ಬರ್ತಲೆ ಇದ್ರು ಕಣೆ.

ಸರೋಜ : ಏಸ್ ಜನಿದ್ರೆ?

ಸಣ್ ತಿಮ್ಮಿ : ಸ್ಯಾನೆ ಜನ ಕಣೆ, ನಮ್ಮೂರ್ ವನ್ನಮನ್ ಪರ್ಸೇ ಅತ್ರೊಟ್ರಿದ್ರು. ಬಯ್‌ವಾಗಿ ಯಪ್ಪ ನನ್ ಬುಟ್ಟು ಎಲ್ಲು ಒಗ್‌ಬ್ಯಾಡ ಕಣೊ ಯಂಕ್ಟೇಸ ಅಂದೆ. ಪಾಪ ಜತೇಲೆ ಇದ್ದ.

ಕನ್ನಾಟಕ್‌ದ ಎಲ್ಲಾ ಕಡಿಂದ್ಲು ಬಂದಿದ್ರಂತೆ. ನಮ್ಮೂರ್ ಕಾರಬ್ಬಕ್ಕೆ ಎತ್ತುಗ್ಳ ಸಿಂಗಾರ ಮಾಡ್ತರಲ್ಲ ಅಂಗೆ ಸಿಂಗಾರ ಮಾಡಿ ಕರ್ಕಂಡ್ ಬಂದಿದ್ರು ಎತ್ತುಗ್ಳ. ಎತ್ತುಗ್ಳೊಳ್ಳೆ ಚೆಂದಾಗಿದ್ವು. ಜನ್ನ ಗದ್ದಕ್ಕೆ ಎಲ್ಲಿ ಗಾಬ್ರಾಗ್ತವೋ ಅಂದ್ಕಂಡಿದ್ದೆ. ಉದ್ರೆಲ್ಲ ಕೆಂಪಿನ ಬಾವ್ಟ ಇಡ್ಕಂಡು, ಇಟೀಟಗ್ಳ ಯಂತದೊ ಕಾಗ್ದದ್ ಬಿಲ್ಲೆ ನ್ಯಾತಾಕಂಡ್ ಇದ್ವು. ಯಂಕ್ಟೇಸಿ ನಂಗೊಂದ್‌ಕೊಟ್ಟಿದ್ದ ಆಕ್ಕಳಕ್ಕೆ, ನಾನು ಆಕ್ಕಂಡಿದ್ದೆ.

ಸರೋಜ : ನೀನ್ ಯಾರ್‍ನುವೆ ಮಾತಡ್‌ಸ್ಲಿಲ್ವಾ?

ಸಣ್‌ತಿಮ್ಮಿ : ಜನ ಅಂದ್ಮೇಲೆ ಮಾತಾಡ್‌ಸ್ದೆ ಇರಕಾಯ್ತದಾ? ಮಾತಾಡ್‌ಸ್ದೆ. ನಮ್ ಮಾತ್ ಆಡೊ ಜನಿದ್ರು. ಮಳೆ, ಬೆಳೆ ಇಚಾರ್‌ಸ್ಕಂಡೆ. ಬಣ್‌ಬಣ್ಣುದ್ ಕನಡಿ ಲಂಗ ಆಕ್ಕಂಡಿವ್ ಎಂಗುಸ್ರುವೆ ಬಂದಿದ್ರು. ಅವರ್ ಮಾತ್ ವಸಿ ತಿಳಿಲಿಲ್ಲ. ಯಂತದೋ ಗುಲ್‌ಬರ್ಗ್‌ವಂತೆ. ಸ್ಯಾನೆ ಮಳಿಲ್‌ವಂತೆ ಅಲ್ಲಿ, ಬ್ಯಾರ್ ಬ್ಯಾರೆ ಏನೋ ಮಾತಾಡೊ ಜನಿದ್ರು. ಎಲ್ಲಾರೂ ನಮ್ಮೊರೆ ಅಂದ ಯಂಕ್ಟೇಸಿ.

ಮೆರಣ್ಗೆ ವಂಡೊವತ್ಗೆ ಸ್ಯಾನೆ ತಡ್‌ವಾತು. ಇನ್ನು ಎಲ್ಲೆಲ್ಲಿಂದ್ಲೋ ಜನ ಬರ್‍ಬೆಕಾಗದೆ, ಲಾರಿನಾಗೆ, ಯ್ಯಾನಾಗೆ. ಪೋಲಿಸೋರೊ ದಾರ್‌ಗಡ್ದ ಆಕ್ಕಂಡಿರವತ್ಗೆ ತಡ ಆಗ್ತಾ ಐತೆ. ಎಲ್ರು ಬತ್ತಿದಂಗೆ ವಂಡುತ್ತೆ ಮೆರಣ್ಗೆ ಅಂದ ಯಂಕ್ಟೇಸಿ. ಧಗೆ ಜಾಸ್ತಿ ಅತ್ಕಂಡ್ ಬುಡ್ತು. ಜನವೆಲ್ ಬಾಯರಿ ಐಸ್‌ಕಡ್ಡಿ ತಗಂಡು ಚೀಪ್ತಿದ್ರು. ನಾನುವೆ ತಗಂಡ್ ಚೀಪ್ದೆ. ತಣ್‌ಗೊಳ್ಳೆ ಚೆಂದಾಗಿತ್ತು. ಅದ್ಕೆ ಏನೋ, ಗಂಟ್ಲು ನಸ್‌ಗುಡುತ್ತೆ ಕಣೆ.

ಸರೋಜ : ಎಲ್ಲೆಲ್ಲಾಸಿ ಮೆರವಣ್ಗೆ ಬಂತೆ?

ಸಣ್ ತಿಮ್ಮಿ : ರಿಜರಿ ಬ್ಯಾಂಕಂತಲ್ಲೆ, ನೋಟ್‌ಗುಳೆಲ್ಲವ ಅಲ್ಲೆ ಮಾಡಿ ವಣಾಕ್ತರಂತಲ್ಲೆ ಅದ್ರು ಮುಂದಾಸಿ ಬಂತು. ಏಣ್ರುಡ್ರು ಕಾಲೇಜುನ್ ಮುಂದ್ಮುಬಂತ್ರು, ನಮ್ಮ ಕರ್‌ಯಕ್‌ನುಡ್ಗಿ ಗಿರ್ದ್ದ ಅಲ್ಲೆ ಓದುತ್ ಕಣೆ. ಒಗ್ ಮಾತಾಡ್ಸನಾ ಅಂದ್ರೆ ಜನವೋಜನ, ಬರ ಬರ್‍ನೆ ನಡ್‌ಯಾಕಾಗ್‌ದ್ದಷ್ಟು ಜನ ಜಾತ್ರೆ.

ಕಾಲೇಜುನ್ ಮುಂದ್ಕೆ ಎಲ್ಲಾ ಸಾಮ್‌ಗೋಳು ಬತ್ತಿದ್ರು, ಸಾಬ್ರು ಸಾಮೊಗಳು, ಲಿಂಗಾತ್ರು ಸಾಮೊಗೋಳು, ಕಿರಿಸ್ತಾನ್ರು ಸಾಮೊಗಳೊ ಎಲ್ಲಾ ಅವ್ರೆ ಅಂದ ಯಂಕ್ಟೇಸಿ. ಸ್ವಾಮ್‌ಗಳ ಜತೇಲಿ ಕೆಂಪ್ಗೆ, ಬಲ್‌ವಾಗಿರೊ ಸಾಮಿನ್ ತೋರಿ ಯಂಕ್ಟೇಸಿ - ಅಗೊಳಕ್ಕೊ, ಆ ಸಾಮಿನೆ ಕಣಕ್ಕೊ, ಎಲ್ಲಾರ್‌ನುವೆ ಒಂದ್ ಮಾಡಿ ಮೆರಣ್ಗೆ ಕರ್ದಿರಾದು. ನಮ ಜನ ಕಂಡ್ರೆ ಬ್ಲಲ್ ಪಿರೀತಿ ಆ, ಸಾಮಿಗೆ. ನಮ್ಮೊರ್‍ಗೆ ಅನ್ಯಾಯಾದಗೆಲ್ಲ ಗುದ್ದಾಡ್ತನೆ ಅಂದ.

ನಮ್ಮೋರೇನೊ? ಅಂತ ಕೇಳ್ದೆ, ಅಲ್ಕಣಕ್ಕ ಅಂದ. ಬಸವಣ್ಣಂತನೇನೊ ಅಂದ್ಕಂಡೆ. ಬ್ಯಾರೆ ಸಾಮ್‌ಗೋಳೆಲ್ಲ ಎಜ್ಜೆಮ್ಯಾಲೆಜ್ಜೆ ಇಕ್ಕಿರಿ ಆವಯ್ಯ ಬರ ಬರ್‍ನೆ ನಡ್ಕಂಡ್ ಬಂದ.

ಅಲ್ಕಣೆ ಸರಾಜ ಈ ಸಾಮ್‌ಗೋಳೆಲ್ಲ ಬತ್ತರೆ ಅಂತ್ ಗೊತ್ತುರ್‍ಲ್ಲಿಲ್ಲ ಕಣೆ. ಗೊತ್ತಿದ್ರೆ ನಮ್ ಕರೆಣ್ಣ ಚಿಕ್ಕಪ್ಪನ್ನುವೆ ಕರ್ಕಂಡ ಬತ್ತಿದೆ. ದೇವ್ರು, ಪವ್ರು ಅಂದ್ರೆ ಸ್ಯಾನೆ ಜೀವ ಅವನ್ಗೆ. ಯಾವತ್ತುವ್ಹೆ ಒಬ್ರು ನೊಂದ್ ಮಾತ ಅಂದೋನಲ್ಲ. ಒಂದೇಟ್ ವಡ್ಡೊನಲ್ಲ. ಉರಾಗೆ ಯಾರ್ ಮಲ್ಲಿ ಅಬ್ಬಾಗ್ಲಿ, ಅರ್ಸೇವಾಗ್ಲಿ, ಮನ್‌ದ್ಯಾವ್ರಾಗ್ಲಿ ಅವ್‌ನಿದ್ದ ತೀರ್‌ಬೇಕು. ಬಂದು ಶಂಖ, ಜಾಗ್‌ಟೆ, ಬನ್‌ವಾಸಿ, ಗಲ್ಡ್‌ಗಂಭ ತಂದು ಪೂಜಿ ಬಂಬಂ ಅಂತ ಕಣ್ ಮುಚ್ ಕಂಡ್ ಶಂಖ ಉದಿರೆ ಕೈ ಎತ್ ಮುಗಿಬೇಕು ಅಂಗೆಯಾ. ಈ ಕಳ್ಳ ಯಂಕ್ಟೇಸಿ ಕರ್‌ಯಣ್ಣನ ಕರಿಲೇ ಇಲ್ಲ.

ಅಂಗೆ ಬತ್ತಾ ಇದ್ವಿ. ಜನ್‌ದೊಳ್ಗೆ ಆ ಪಾಪ್ರ ಅವ್ನ ಇದ್ದ ಕಣೆ ಎತ್ತಿನ್‌ಗಾಡಿ ಮ್ಯಾಲೆ.

ಸರೋಜ : ಯಾರೆ?

ಸಣ್ ತಿಮ್ಮಿ : ನಮ್ಮೂರ್ ವನ್ನಮ್ಮ್ ಇರ್ಲಿಲ್ವೇನೆ, ಈ ಊರ್ಗೆ ಕೊಟ್ಟಿತ್ತು. ಅವ್ಳುವೆ ಒಳ್ಳೆ ಧರ್ಮಾತ್ಮ. ಆ ವನ್ನಮ್‌ನಂತುವೆ ಬಿಡು ಆ ಗುಡಿ ವಳ್ಗಿರೊ ವನ್ನಮ್‌ನು ವಂದೆಯೇ ಇವ್ಳು ವಂದೆಯಾ. ಅಂತ ನನ್ ತಾಯಿ ವಟ್ಟೆಲೆ ಇಂತ ಇಸ್ಟಾವು ಎಂಗ್ ಉಟ್ ಬುಡ್ತೊ ಕಣೊ. ಆ ರಗುತ್‌ಕಳ್ಳ ಕೊಡಬಾರ್ದ್ ಕೊಲೆ ಕೋಟ್‌ಬುಟ್ ಕಣೆ ಅಪ್ಪ ಅವ್‌ಗೆ, ಇಸ್ಟಾತ್ಕ. ಈ ಜನ್ ಜಾತ್ರೆವಳ್ಗೆ ಇಂತ ಇಸ್ಟಾವ್‌ಗಳೇಸಿದ್ದಾವೊ ಅಂದ್ಕಂಡೆ ಕಣೆ. ಕಣ್ಣೀರ್ ವರ್‌ಸ್ಕಂಡ್ಲು ತಿಮ್ಮಿ.

ಸರೋಜ : ಎಲ್ಲರ್ ಮನೇಲು ಇದ್ದುದೆ, ಮುಂದ್ಕೇಳೆ.

ಸಣ್‌ತಿಮ್ಮಿ : ನಡ್ಕಂಡ್ ಬಂದ್ ಜನ್‌ವೆಲ್ಲ ಬಯ್‌ಲಾಗ್ ಸೇರ್ತು. ಮ್ಯಾಗಡೆಲಿ ಸ್ಯಾನೆ ಜನ ಕೂರ್ಸಿದ್ರು. ಸ್ವಾಮ್‌ಗೋಳೋಲ್ಲೆ ಇದ್ರು ಜತೇಲಿ ಇನ್ನು ಬ್ಯಾರೆ ಜನ್‌ವು ಇದ್ರು. ಅವ್ರೆಲ್ಲ ಸಂಗ್‌ದೋರು, ಆಪೀಸಿನ್ ಕೆಲ್ಸ್‌ಕೋಗೋರು ಅಂತೆಳ್ದೆ ಯಂಕ್ಟೇಸಿ, ಅಲ್ಕಣೆ ಈ ಊರಾಗೆ ಎಂಗ್ರುಸ್ರುವೆ ಸ್ಯಾನೆ ಜನ ಕೆಲ್ಸ್‌ಕೊಯ್ತರೆ ಅಂತಿದ್ದಲ್ಲೆ, ಅಲ್ಲಿ ಮ್ಯಾಲ್ ಕುಂತಿದ್ದೊರೆಲ್ಲ ಬರಿ ಗಂಡ್‌ಸ್ರೆಯಾ, ಸಾಮ್‌ಗೊಳು ಗಂಡುಸ್ರೆಯ, ಸಂಗ್‌ದೊರು ಗಂಡುಸ್ರೆಯಾ. ಉಡ್‌ಕಿರೊಂದಾರು ಎಣ್ಣುಳಿಲ್ಲ.

ಸರೋಜ : (ಅವಳ ಪ್ರಶ್ನೆಗೆ ಉತ್ರ ಹೇಳೋದು ಸುಲಭದ್ದಲ್ಲ ಅನ್ನಿಸಿ ಬ್ಯಾರೆ ಮಾತು ತಗುದ್ಲು) ಯಾರ್ಯಾರ್ ಮಾತಾಡಿರೆ? ಏನೇನ್ ಮಾತಾಡಿರೆ?

ಸಣ್ ತಿಮ್ಮಿ : ಆ ಕೆಂಪನೆ ಸಾವಿ ಮಾತಾಡ್ದ. ನಮ್ ಜನ್ದ್ ಸಾಮೊಗೊಳುವೆ ಬ್ಯಾರೆ ಸಾಮ್‌ಗೊಳಗಿಂತ ಚೆಂದಾಗಿ ಮಂತ್ರ ಪಂತ್ರ ಏಳಾದ್ ಕಲ್ತ್ ಕಂಡವ್ರೆ. ನಮ್ಮ ಜನ್ಕೆ ಅನ್ಯಾಯ ಆಗಿರೊವಾಗಿ ನಮ್ ಮಂತ್ರಿಗೋಳೊ ಇನ್ನು ಕುರ್ಚಿ ಭದ್ರವಾಗಿ ಇಡ್ಕೊಂಡು ಕುಂತವ್ರೆ. ಅನ್ನಾಯ ಆಗಿರೋವಾಗ ಏನೂ ಮಾಡ್ದೆ, ಏನ್ ಕಡ್ದ್ ಉತ್ರಸಕ್ಕೆ ಇನ್ನು ಕುರ್ಚಿ ಮ್ಯಾಲ್ ಕುಂತಿದೀರಿ, ಕುರ್ಚಿ ಬಿಟ್ ಬರ್ರಿ ಅಂದ. ಸರ್ಯಾಗೆ ಕೊಟ್ಟ ಕಣೆ. ಎಲೆಕ್ಸನ್ನಾಗೆ ಗೆದ್‌ಮ್ಯಾಲೆ ಆಸ್ತಿ ಅಡ್ಸು ಮಾಡ್ಕಂಡ್ ತಂಪಾಗಿರೋರು, ಬಿಟ್ ಯಂಗ್ ತಾನೆ ಬಂದಾರು?

ಸಣ್ ತಿಮ್ಮಿ : ಸಾಮಿ ಬಿಟ್ಟು ಇನ್ಯಾರೆ ಮಾತಾಡಿರೆ?

ಸಣ್‌ತಿಮ್ಮಿ : ಇನ್ಯಾರೊ ಒಬ್ಬ ನಮ್‌ಸಣ್‌ರ್ಸ್ ಇದ್ದಂಗಿದ್ದ ಕಣೆ. ಬಲ್ ಚೆಂದಾಗ್ ಮಾತಾಡ್ದ, ನಮ್ಮೋರನಂತೆ. ನಮ್ಮೋರ್ ಕತೆನೆಲ್ಲ ಬರ್ದವ್‌ನಂತೆ. ಈ ಕಡೆ ನಂಜುನ್‌ಗೂಡ್ ಕಡೆವ್‌ನಂತೆ.

ಸರೋಜ : (ಅವಳ ಮಾತಿಗೆ ನಕ್ಕು) ಏನ್ ಮಾತಾಡಿನೆ ಅವ್ನು?

ಸಣ್ ತಿಮ್ಮಿ : ಎಲ್ಲಾ ಸಾಮ್‌ಗೋಳು ಜಾತೀವಳ್ಗೆ ಮದ್‌ವಾಗದ್ ಬೇಡ, ಜಾತಿ ಬಿಟ್ ಮದ್‌ವಾಗ್ರಿ ಅಂತ ಏಳ್ದಿ, ಆಗ್ ನಾವೇನೂ ಕೇಳಾದೆ ಇಲ್ಲ, ಕೆಲ್ಸ್‌ದಾಗಿರೋ ನಮ್ಮೊರೆಲ್ಲ, ನಮ್ ಜನ್‌ಗೋಳು ಏಸ್ ಜನ ಬಡುವ್ರವ್ರೆ ಅಂತ ಒಂದೊಂದು ಮನ್ಸು ಆಸ್ರೆ ಆಗ್ ಬೇಕು ಅಂದ. ದಿಟ್‌ವಾದ್ ಮಾತ್‌ನೆ ಅಂದ ಕಣೆ.

ಸರೋಜ : ಅದ್ಸರಿ ಇದ್ನೆಲ್ಲ ನೋಡಿ ನಿಂಗೇನ್ ಅನ್‌ಸ್ತೆ.

ಸಣ್ ತಿಮ್ಮಿ : ಅಲ್ಕಣೆ ಸೇರಿದ್ ಜನ್‌ದಾಗೆ ಸ್ಯಾನೆ ಜನ ಉಳ್ಮೆ ಮಾಡೋರು, ಕೂಲಿ ನಾಲಿ ಮಾಡೋರು, ಏಸೊ ಜನ್ಕೆ ಕಾಲಾಗ್ ಮೆಟ್ಟೆ ಇರ್ಲಿಲ್ಲ. ಉರ್ಯಾ ಬಿಸ್ಲಾಗೆ ಸುಡ ಟಾರ್‌ರೋಡಾಗೆ ನಡ್ಕಂಡ್ ಬಂದ್ರು. ಇಲ್ಲಿ ಕೆಲ್‌ಸ್ದಾಗಿರೋ ಜನ್ಕೆ ಅನ್ನಾಯಾಗದೆ ಅಂತ ಎಲ್ಲೆಲಿಂದಲೋ ಬಂದಿದ್ರು. ಪಾಪ ಕಾಸು ಕರಿಮಣಿ ಯಂಗ್ ವಂದ್‌ಸ್ಕಂಡ್ ಬಂದಿದ್ರೊ ಏನೊ, ಕೆಲ್ಸ್‌ದಾಗಿದ್‌ಕಂಡು ಕೈ ತುಂಬಾ ದಡ್ಡ ಎಣ್ಸ ಕಳ ಜನಾನುವೆ ಕೂಲಿ ನಾಲಿ ಮಾಡೊ ಜನ್‌ದೊಟ್ಟೆ ಸಂಕ್ಟ ಕೇಳ್‌ಬೇಕು ಕಣೆ. ಮ್ಯೊಕ್ ಅತ್ತೋರು ಅಡೆಲಿರೊರ್ನ ಕೈ ಇಡ್ದ್ ಎತ್‌ಬೇಕ್ ಕಣೆ. ನಮ್ ಒಲೇರ್ ಮಾದಿರು, ಏಸೊಬೇಕು, ಉಣ್ಣಾಕೆ, ಉಡಾಕೆ ಮಾಡ್ಕಂಡವ್ರೆ. ಪಾಪ ದಕ್ಲೊರಿನ್ನುವೆ ಬೇಡ್ಕಂಡೆ ತಿಂತರೆ ಕಣೆ, ಏನೋ ಈ ಮಾಸಾಮಿ ಎಲ್ಲಾರ್ನು ಸೇರ್ಸೊ ಕಾರ್ಯ ಮಾಡವ್ನೆ ಮುಂದ್ಕೇನಾರು ಒಳ್ಳೆದಾದಾತೇನೊ. ನಾನೇನೊ ಅಳ್ಳಿಮುಕ್ಕ ನಂಗ್ ಕಂಡುದ್ ಏಳ್ದೆ. ನೀನ್ಯಾಕಮ್ಮಿ ಬರ್ಲಿಲ್ಲ ಮೆರಣ್ಗೆಗೆ? ಇಲ್ಲಿದ್‌ಕಂಡು, ನೀನು ಕೆಲ್ಸ್‌ಕೋಗಳೆ ಅಲ್ವಾ? ಕೆಲ್ಸದಾಗಿರೊರೆಲ್ಲ ರಜ ತಗಂಡ ಬರ್ರಿ ಅಂತ ಏಳಿದ್ರಂತೆ?

ಸರೋಜ : (ತನ್ನ ಬುಡಕ್ಕೆ ಬಂತು ಅನ್ಸಿ) ಏನಿಲ್ಲ ಕಣೆ ಬರ್‌ಬಾರ್ದು ಅಂತೆನೂ ಇಲ್ಲ, ಆಫೀಸ್‌ನಾಗೆ ಸ್ಯಾನೆ ಕೆಲ್ಸಿತ್ತು. ಅಲ್ದೆಯಾ ಆಫೀಸ್‌ನಾಗೆ ಮ್ಯಾಲಿರೋರ್ಗೆ ಗೊತ್ತಾದ್ರೆ ರಗ್ಳೆ ಮಾಡ್ತರೆ. ಯಂಗುವೆ ಸಂಘದಾಗಿರೊರೆಲ್ಲ ಅವ್ರಲ್ಲ ಏನಾರು ಮಾಡ್ತರೆ ಒಗ್‌ದಿದ್ರು ಆಯ್ತು ಅಂತ ಬರ್ಲಿಲ್ಲ ಕಣೆ.

ಸಣ್ ತಿಮ್ಮಿ : ಎಂತ ಮಾತಂತ ಆಡಿಯೆ? ನನ್ನಂತ ತಿರ್‌ಬೋಕಿನಿ ಅಲ್ಲಿಂದ ಇಲ್ಗ್ ಬಂದಿದೀನಿ, ನೀನ್ ಇಲ್ಲಿದ್‌ಕಂಡ್ ಬಂದಿಲ್‌ವಲ್ಲ. ಕೈ ತುಂಬ ಸಂಬ್ಳ ಎಣಿಸ್ಕಳೊ ನಿಮ್ಮೊಂತೋರೆ ಬರ್ಲಿಲ್ಲ ಅಂದ್ರೆ ಯಂಗೆ? ಯಾರೊ ಒಬ್ರು ಮಾಡ್ಲಿ ನಂಮ್ ಸಲ್‌ವಾಗಿ ಅಂತ ಕಾಯಾದಾ? ಅಂಗಾರೆ ನಮ್ಮೊಂತೋರಿಗೆ ಯಾರ್ ಬಂದಾರವ್ವ? ನಾವ್ ಯಾರಿಗ್ ಕಾಯ್ಕಂಡ್ ಕುಂತ್ಕಳನಾ?

– ಸರಸ್ವತಿ ದು.

ಕರೆ

ಹೇ ಬುದ್ಧನ ಶಿಷ್ಯರೇ!
ಹೇ ಗೀತೆಯ ಆರಾಧಕರೇ!!
ಹೇ ನಾನಕನ ಅನುಯಾಯಿಗಳೇ!!!
ಹೇ ಹಜರತ್‌ನ ಹಾಜಿಗಳೇ!!!!
ಜನನಿಬಿಡ ಚೌಕದಲ್ಲಿ ನನ್ನ
ಕೊಲ್ಲುವ ಮೊದಲು
ನನ್ನ ಅಂತರಂಗವ ಕೊಂದು ಬಿಡು
ಮತ್ತೆ ಅಳೆದು ಬಿಡು
ಹಸಿದ ಬಳಲಿದ ಹೊಟ್ಟೆಯ
ಗಜಕಡ್ಡಿಯಿಂದ
ಮತ್ತೆ
ನಿನ್ನ ಬುದ್ಧ, ನಾನಕ, ಈಶ್ವರ
ಅಲ್ಲಾ ವಾಸಿಸುವ
ಮನಮಂದಿರವ ಕೆಡವಿ ಬಿಡು
ನನ್ನ ಮೂಳೆಗಳನ್ನು
ಗುರುದ್ವಾರದೆಡೆಗೆ ಹೋಗುವ
ರಸ್ತೆಯ ಮೇಲೆ ಹರಹಿ ಬಿಡು
ಮಂದಿರದಲಿ
ನನ್ನ ಭಸ್ಮವ ಚೆಲ್ಲಿ ಬಿಡು
ಮಸೀದಿಯಲ್ಲಿ
ನನ್ನ ತಲೆಯ ತೂಗಿಹಾಕಿ ಬಿಡು
ಏಸುವಿನ ಶಿಲುಬೆಯ ಮೇಲೆ
ನನ್ನ ಧೂಳ ಚೆಲ್ಲಿಬಿಡು
ಆದರೆ
'ಎಲ್ಲರ ಹಿತ ಚಿಂತಿಸುವ'
ನನ್ನ ಆತ್ಮಕ್ಕೆ ಏನು ಮಾಡುವೆ!
ಆತ್ಮ ಸತ್ತಿಲ್ಲ
ಏಸು ಅಥವಾ ಹಜರತ್ ಸತ್ತಿಲ್ಲ
ಬುದ್ಧ ನಾನಕರೂ ಸತ್ತಿಲ್ಲ
ಸತ್ತವನೆಂದರೆ
ಮನುಷ್ಯನಿಂದ
ಮನುಷ್ಯನೇ?!

REGD No. KRNA 324

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067